# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA






ಸಂಪುಟ:02 • ಸಂಚಿಕೆ:13 • ನೋಂದಣಿ ಸಂ.:KARKAN27911 • ವಿಜಯನಗರ • 05.07.2024 • ಶುಕ್ರವಾರ • ಪುಟ:04 • ಬೆಲೆ:2
Volume:02 • Issue:13 • Reg.No:KARKAN27911 • VIJAYANAGARA • 05.07.2024 • Friday • Page:04 • Rs:2


# ಅನ್ನದಾತನ ಆರಾಧ್ಯ ದೈವ ಬಸವ

## ಇಂದು ಮಣ್ಣೆತ್ತಿನ ಅಮವಾಸ್ಯೆ । ಕೃಷಿ ಕುಟುಂಬಗಳ ಮನೆ ಮನೆಗಳಲ್ಲಿ ಮಣ್ಣಿನ ಎತ್ತುಗಳಿಗೆ ಪೂಜೆ

**ಹಂಪಿ ಟೈಮ್ಸ್ ಹೊಸಪೇಟೆ**

ನದಿ, ಕೆರೆಯ ಜಿಗಿಮಣ್ಣು ತಂದು ಎತ್ತುಗಳನ್ನು ಮಾಡಿ, ಜೋಳದ ಕಾಳುಗಳನ್ನೇ ಕಣ್ಣಾಗಿಸಿ, ಅಕ್ಕಿಯಿಂದ ಅದರ ಬಾಯಿಯನ್ನಾಗಿಸಿ, ಅದಕ್ಕೊಂದು ಮಣ್ಣಿನಿಂದಲೇ ಗ್ವಾದಲಿ ರಚಿಸಿ ಅದರೊಳಗೆ ಅಕ್ಕಿ, ಜೋಳ, ಧಾನ್ಯಗಳನ್ನು ಹಾಕಿ, ಸಿಂಗರಿಸಿ ಭಕ್ತಿಯಿಂದ ಪೂಜೆ ಮಾಡಿ ಸಂಭ್ರಮಿಸುತ್ತಿದ್ದ ಮಣ್ಣೆತ್ತಿನ ಅಮಾವಾಸ್ಯೆಯ ಆ ದಿನಗಳು ಇಂದು ಬಹುತೇಕ ಕಡೆ ಕಾಣೆಯಾಗಿದ್ದರೂ, ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿನ ರೈತರು ಈ ಆಚರಣೆಯನ್ನ ಮುಂದುವರೆಸಿ, ಮಣ್ಣೆತ್ತಿನ ಅಮವಾಸ್ಯೆಯ ಮಹತ್ವವನ್ನು ಸಾರುತ್ತಿದ್ದಾರೆ.

ಜಾಗತೀಕರಣದ ಭರಾಟೆಯಲ್ಲಿ ಎತ್ತುಗಳ ಬಳಕೆಯ ಸಂಖ್ಯೆ ಕುಸಿದಿದ್ದರೂ, ಎತ್ತುಗಳನ್ನೆ ಬಳಸುತ್ತಿರುವ ಕೃಷಿಕರು ಸಾಂಪ್ರದಾಯಿಕ ಆಚರಣೆಗಳನ್ನ ಅರ್ಥಪೂರ್ಣವಾಗಿ ಆಚರಿಸುವ ಮೂಲಕ ಜೀವಂತವಾಗಿಸಿದ್ದಾರೆ. ಮಣ್ಣೆತ್ತಿನ ಅಮವಾಸ್ಯೆಯ ಹಿಂದಿನ ದಿನವೆ ರೈತರು ಜಿಗಿಮಣ್ಣು ತಂದು, ಹದಕ್ಕೆ ಬೇಕಾದಷ್ಟು ನೀರು ಹಾಕಿ ಭಕ್ತಿಯಿಂದ ಮಣ್ಣನ್ನು ಎತ್ತಿನ ರೂಪದಲ್ಲಿ ಸಿದ್ಧಗೊಳಿಸಿ ಪೂಜೆಗೆ ಅಣಿಮಾಡಿಕೊಳ್ಳುವ ದೃಶ್ಯ ಎತ್ತುಗಳನ್ನೆ ಆರಾಧ್ಯ ದೈವವೆಂದು ಭಾವಿಸಿ ಜೀವನ ಮಾಡುವ ಅನೇಕ ಕೃಷಿಕರ ಕುಟುಂಬಗಳಲ್ಲಿ ಇದನ್ನು ಕಾಣಬಹುದಾಗಿದೆ. ಆದರೆ ಇಂದು ಕೃಷಿಭೂಮಿ ಇಲ್ಲದ ಮತ್ತು ಕೃಷಿಯನ್ನೆ ಮಾಡದ ಇಂದಿನ ಅನೇಕ ರೈತಾಪಿ ಕುಟುಂಬದ ಯುವ ಪೀಳಿಗೆಗಳು ಹಿರಿಯರು ಆಚರಿಸಿಕೊಂಡ ಬಂದ ಸಂಪ್ರದಾಯವನ್ನು ಬದಲಾದ ಜೀವನಶೈಲಿಯಲ್ಲಿ ಮಾರುಕಟ್ಟೆಯಲ್ಲಿ ಚಿತ್ರಗಾರರು ಸಿದ್ದಪಡಿಸಿದ ಮಣ್ಣೆತ್ತುಗಳನ್ನು ಖರೀದಿಸಿ, ಅಮವಾಸ್ಯೆಯಂದು ಮನೆಯ ಜಗುಲಿ ಮೇಲಿಟ್ಟು ಪೂಜೆ ಮಾಡಿ, ಸಿಹಿ ನೈವೇದ್ಯ ಸಮರ್ಪಿಸಿ ಭಕ್ತಿ ಸಲ್ಲಿಸುತ್ತಿದ್ದಾರೆ.



**ಅಮವಾಸ್ಯೆ ವೈಶಿಷ್ಟ್ಯ :** ಮಣ್ಣಿನಿಂದ ಆರಂಭವಾಗುವ ಮಣ್ಣೆತ್ತು ಅಮವಾಸ್ಯೆ. ಈ ಅಮವಾಸ್ಯೆಗೆ ತಮ್ಮ ಮನೆಯ ಎತ್ತುಗಳನ್ನು ಸಿಂಗರಿಸುವುದಷ್ಟೇ ಅಲ್ಲ. ಎತ್ತುಗಳು ಇರಲಿ ಇಲ್ಲದಿರಲಿ ಎಲ್ಲರೂ ಗೌರವಿಸುವರು. ಮಣ್ಣಿಂದ ಎತ್ತಿನ ಮೂರ್ತಿಗಳನ್ನು ಮಾಡಿ ಅವುಗಳನ್ನು ಮನೆಯಲ್ಲಿ ಇಟ್ಟು ಅಮವಾಸ್ಯೆಯಂದು ಪೂಜಿಸುವರು. ಮರುದಿನ ಪಾಡ್ಯ ಕೂಡ ಪೂಜಿಸಿ ಹೊಲ ಹೊಂದಿದವರು ಅವುಗಳನ್ನು ನಾಗರ ಪಂಚಮಿಯವರೆಗೂ ದಿನನಿತ್ಯ ಪೂಜಿಸುತ್ತ ಕೆರೆಕೆಟ್ಟಂಬಲಿ ಅಂತ ಮಾಡಿ ಅಂಬಲಿ ಮಾಡಿಕೊಂಡು ಪಂಚಮಿಯ ನಂತರದ ದಿನ ತಮ್ಮ ಹೊಲಗಳಿಗೆ ತಗೆದುಕೊಂಡು ಹೋಗಿ ಇಡುವರು. ಮಳೆಯಿಂದ ಬಿತ್ತಿದ ಫಸಲು ಚೆನ್ನಾಗಿ ಬರಲಿ, ತಮ್ಮ ರಾಸುಗಳಿಗೆ ಯಾವ ತೊಂದರೆಯೂ ಬಾರದಿರಲಿ ಎಂದು ಕೊಂಡು ಭಕ್ತಿಯಿಂದ ಸ್ಮರಿಸುವ ಅಮವಾಸ್ಯೆಯಿದಾಗಿದೆ.

> ಮಣ್ಣೆತ್ತಿನ ಅಮವಾಸ್ಯೆಯಂದು ಮನೆಗಳಲ್ಲೆ ಮಣ್ಣಿನಿಂದ ಎತ್ತುಗಳನ್ನು ತಯಾರಿಸಿ ಪೂಜೆ ಮಾಡುತ್ತಿದ್ದ ಆ ದಿನಗಳು ಇಂದು ಕಣ್ಮರೆಯಾಗುತ್ತಿವೆ. ಉತ್ತರ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ಸಂಭ್ರಮದಿಂದ ಆಚರಿಸಲಾಗುತ್ತದೆ. ಮನೆಗಳಲ್ಲಿರುತ್ತಿದ್ದ ಆಕಳು, ಎತ್ತುಗಳು ಮನುಷ್ಯನ ಜೀವನದ ಅವಿಭಾಜ್ಯ ಅಂಗವಾಗಿವೆ. ಅಂದು ಕೆಮ್ಮಿದ್ದರೆ ಮನೆಯಲ್ಲೇ ಗೋಮೂತ್ರವನ್ನು ಕುಡಿಸುತ್ತಿದ್ದರು. ಕೆಮ್ಮು ಹೋಗುತ್ತಿತ್ತು. ಎತ್ತುಗಳ ತಾಯಿ ಆಕಳನ್ನು ಹಾಗೂ ಎತ್ತುಗಳನ್ನು ದೈವಸ್ವರೂಪವಾಗಿ ಪೂಜಿಸಲ್ಪಡುವ ಮಣ್ಣೆತ್ತಿನ ಅಮವಾಸ್ಯೆ ಬಾಲ್ಯದ ನೆನಪುಗಳನ್ನು ಮರಳಿ ತರುತ್ತದೆ.
>
> – **ವೀರಸಂಗಯ್ಯ** ಹಿರಿಯ ರೈತ ಮುಖಂಡ.

### ಫಲ ಸಮೃದ್ಧಿಯ ನಿರೀಕ್ಷೆಯಲ್ಲಿ ರೈತರು

ರೈತರು ಎತ್ತುಗಳನ್ನು ಎಷ್ಟರ ಮಟ್ಟಿಗೆ ನಂಬಿರುವರೆಂದರೆ ಕಾರಹುಣ್ಣಿಮೆಯ ಕರಿ ಹರಿದು ನಂತರ ಮನೆಗೆ ತರುವಾಗ ಮನೆಯ ಬಾಗಿಲಲ್ಲಿ ತಾವು ಆ ವರ್ಷ ತಮ್ಮ ಹೊಲಗಳಿಗೆ ಯಾವ ಬೆಳೆ ಬಿತ್ತಬೇಕು ಎಂದು ನಿರ್ಧರಿಸುವರೋ ಆ ಎಲ್ಲ ಧಾನ್ಯಗಳನ್ನು ಮನೆಯ ತಮ್ಮ ಎತ್ತು ಹಾದು ಹೋಗುವ ಬಾಗಿಲಲ್ಲಿ ಇಡುತ್ತಾರೆ ಆಗ ಎತ್ತು ತನ್ನ ಕಾಲಿನಿಂದ ಯಾವ ಧಾನ್ಯವಿದ್ದ ಸೇರನ್ನು ತಳ್ಳಿ ಮುಂದೆ ಸಾಗುತ್ತದೆಯೋ ಆ ಧಾನ್ಯದ ಬೆಳೆಯನ್ನು ಆ ವರ್ಷ ತಮ್ಮ ಹೊಲಕ್ಕೆ ಹಾಕುವ ಮಟ್ಟಿಗೆ ಎತ್ತುಗಳ ಮೇಲೆ ಭಕ್ತಿಯನ್ನು ಹೊಂದಿರುವರು. ಕಾರಹುಣ್ಣಿಮೆಗೆ ಮಳೆ ಬಿದ್ದು ತಮ್ಮ ಹೊಲಗಳಿಗೆ ಬಿತ್ತನೆ ತಯಾರಿ ಮಾಡಿದ ರೈತ ಮಣ್ಣೆತ್ತು ಅಮವಾಸ್ಯೆ ದಿನ ಎತ್ತುಗಳನ್ನು ಸಿಂಗರಿಸಿ ಅವುಗಳಿಗೂ ಕೂಡ ವಿಶ್ರಾಂತಿ ನೀಡುವ ಜೊತೆಗೆ ಪೂಜ್ಯನೀಯವಾಗಿ ಪೂಜಿಸುವನು. ಅವುಗಳಿಗೆ ಉತ್ತಮ ಆಹಾರ ನೀಡುವುದು. ಚೆನ್ನಾಗಿ ನೋಡಿಕೊಳ್ಳುವುದು ಮುಂದೆ ಶ್ರಾವಣ ಆರಂಭವಾಗುವ ಹೊತ್ತಿಗೆ ಅವು ವಿಶ್ರಾಂತಿಯಿಂದ ಮತ್ತೆ ಹೊಲ-ಗದ್ದೆಗಳ ಕೆಲಸಕ್ಕೆ ಅಣಿಯಾಗಲೆಂದು ಪೂಜಿಸುವನು. ಅಷ್ಟೇ ಅಲ್ಲ ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ಕೂಡ ಜಗುಲಿಯ ಮೇಲಿಟ್ಟು ನಾಗರ ಪಂಚಮಿಯ ನಂತರದ ದಿನ ಕೆರೆಕಟ್ಟಂಬಲಿ ಅಂತಾ ಆಚರಿಸುವರು. ಈ ದಿನ ಮಣ್ಣೆತ್ತಿನ ಅಮವಾಸ್ಯೆ ಪೂಜಿಸಿದ ಮೂರ್ತಿಗಳನ್ನು ಮನೆಯಲ್ಲಿ ಅಂಬಲಿ ಮಾಡಿಕೊಂಡು ಹೊಲಕ್ಕೆ ಒಯ್ದು ಒಂದೆಡೆ ಬೇವಿನ ಮರವಿದ್ದರೆ ಅವುಗಳ ಕೆಳಗೆ ಇಟ್ಟು ಅಂಬಲಿ ಎಡೆ ಹಿಡಿದು ಬರುವರು. ಅಂಬಲಿ ಮನಸಿಗೆ ತಣಿವು. ಅಂಬಲಿ ಕುಡಿದ ಮನಸು ಹೇಗೆ ತಣಿದು ಮತ್ತೆ ಚೇತನಗೊಳ್ಳುವುದೋ ಹಾಗೆ ತನ್ನ ಜಾನುವಾರುಗಳ ಬದುಕು ಕೂಡ ತಣಿವಿನಿಂದ ವರ್ಷವಿಡೀ ಕೂಡಿರಲಿ ಎಂಬ ಭಕ್ತಿ ಭಾವ ರೈತರದ್ದಾಗಿದೆ.

---

**ಮೈಕ್ರೋ ನ್ಯೂಸ್**

### ಜು.14 ರಂದು ರಾಷ್ಟ್ರೀಯ ಮಟ್ಟದ ಉಪ್ಪಾರ ವಧುವರರ ಸಮಾವೇಶ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯ ಉಪ್ಪಾರ ಮಹಾ ಸಭಾ ಹಾಗೂ ವಿಶ್ವ ಭಗೀರಥ ಟ್ರಸ್ಟ್ ಸಹಯೋಗದಲ್ಲಿ ರಾಷ್ಟ್ರೀಯ ಮಟ್ಟದ ವಧುವರರ ಸಮಾವೇಶವನ್ನು ಜು.14 ರಂದು ಹುಬ್ಬಳ್ಳಿಯಲ್ಲಿ ಆಯೋಜಿಸಲಾಗಿದೆ ಎಂದು ರಾಜ್ಯ ಉಪ್ಪಾರ ಮಹಾಸಭಾದ ರಾಜ್ಯಾಧ್ಯಾಕ್ಷ ವಿಷ್ಣು ಲಾತೂರು ತಿಳಿಸಿದ್ದಾರೆ.

ಹುಬ್ಬಳ್ಳಿಯ ಸವಾಯಿ ಗಂಧರ್ವ ಹಾಲ್‌ನಲ್ಲಿ ಉಪ್ಪಾರ ವಧು ವರರ ಸಮಾವೇಶವನ್ನು ಬೃಹತ್ ಮಟ್ಟದಲ್ಲಿ ಏರ್ಪಡಿಸಲಾಗಿದೆ. ಸಮಾವೇಶದಲ್ಲಿ ರಾಜ್ಯ ಮತ್ತು ಅಂತರ್‌ರಾಜ್ಯಗಳಿಂದ ವಧು ವರರು, ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲಿದ್ದಾರೆ. ಸಮಾವೇಶದಲ್ಲಿ ಭಾಗವಹಿಸಲಿಚ್ಛಿಸುವವರು ಮುಂಚಿತವಾಗಿ ನೋಂದಾಯಿಸಿಕೊಂಡು ವಧು-ವರರ ಭಾವಚಿತ್ರದೊಂದಿಗೆ ಹಾಜರಾಗತಕ್ಕದ್ದು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ: 9449886150, 9448225046, 9448076415 ಸಂಪರ್ಕಿಸಬಹುದು.

### ಕಲಾವಿದರಿಗೆ ಮಾಸಾಶನ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ನಾಡು-ನುಡಿಯ ಸೇವೆಗೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿ, ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಲಾವಿದರಿಗೆ ಮಾಸಾಶನ ನೀಡಲಾಗುದು.

ಸೌಲಭ್ಯಕ್ಕೆ ಅರ್ಜಿ ಆಹ್ವಾನ.

ವಿಜಯನಗರ ಜಿಲ್ಲೆಯಲ್ಲಿರುವ 58 ವರ್ಷ ಮೇಲ್ಪಟ್ಟ ಕಲಾವಿದರು ಜನ್ಮ ದಿನಾಂಕದ ದಾಖಲೆಯೊಂದಿಗೆ ಹೊಸಪೇಟೆಯ ತಾಲೂಕು ಕಚೇರಿಯಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಬಂದು ಮಾಸಾಶನ ಅರ್ಜಿಗಳನ್ನು ಪಡೆಯಬಹುದಾಗಿ. ನಿಗದಿತ ಅರ್ಜಿ ನಮೂನೆಯ ಮಾದರಿಯು ಈ ಇಲಾಖೆಯಲ್ಲಿ ಲಭ್ಯವಿರುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

### ಡೆಂಗ್ಯು ಪರೀಕ್ಷೆಯನ್ನು ಸರ್ಕಾರ ನಿಗದಿಪಡಿಸಿದ ದರದಲ್ಲಿಯೇ ಪರೀಕ್ಷಿಸಿ

**ಹಂಪಿ ಟೈಮ್ಸ್ ಬಳ್ಳಾರಿ**

ಡೆಂಗ್ಯು ರೋಗದ ಪರೀಕ್ಷೆಯನ್ನು ಖಾಸಗಿ ಆಸ್ಪತ್ರೆ, ಡಯಾಗ್ನೋಸ್ಟೀಕ್ ಸೆಂಟರ್ ಮತ್ತು ಪ್ರಯೋಗಾಲಯಗಳಲ್ಲಿ ಸರ್ಕಾರ ನಿಗದಿ ಪಡಿಸಿದ ದರದಲ್ಲಿಯೇ ಪರೀಕ್ಷೆ ಕೈಗೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶಬಾಬು ಅವರು ತಿಳಿಸಿದ್ದಾರೆ.

ಡೆಂಗ್ಯು ರೋಗದ ಪರೀಕ್ಷೆಯನ್ನು ಕೈಗೊಳ್ಳುವಾಗ ಯಾವುದೇ ಮಾನದಂಡವಿಲ್ಲದೆ ರೋಗಿಗಳಿಂದ ಹೆಚ್ಚು ಹಣ ಪಡೆಯುತ್ತಿರುವುದನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರ ಅಧಿಕೃತ ಆದೇಶ ಹೊರಡಿಸಿದೆ ಮತ್ತು ನಿಗದಿಪಡಿಸಿದ ದರದಂತೆ ರೋಗಿಗಳಿಂದ ಹಣ ಪಡೆಯಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ ಎಂದಿದ್ದಾರೆ.

**ದರ:** ಡೆಂಗ್ಯು ಎಲಿಸಾ ಎನ್‌ಎಸ್1 ಟೆಸ್ಟ್‌ಗೆ ರೂ.300, ಡೆಂಗ್ಯು ಎಲಿಸಾ ಐಜಿಎಮ್ ಟೆಸ್ಟ್‌ಗೆ ರೂ.300, ಸ್ಕ್ರೀನಿಂಗ್ ಟೇಸ್ಟ್‌ನಲ್ಲಿ ರ‍್ಯಾಪಿಡ್ ಕಾರ್ಡ್ ಟೆಸ್ಟ್ (ಎನ್‌ಎಸ್1, ಐಜಿಎಮ್ ಹಾಗೂ ಐಜಿಜಿ) ಒಟ್ಟು ರೂ.250 ದರ ನಿಗದಿಪಡಿಸಲಾಗಿದೆ. ಸಾರ್ವಜನಿಕರಿಂದ ಯಾವುದೇ ದೂರುಗಳು ಬರದಂತೆ ಜಿಲ್ಲೆಯ ಎಲ್ಲಾ ಐದು ತಾಲ್ಲೂಕುಗಳ ಖಾಸಗಿ ಆಸ್ಪತ್ರೆ ಮತ್ತು ಡಯಾಗ್ನೋಸ್ಟಿಕ್ ಸೆಂಟರ್, ಪ್ರಯೋಗಾಲಯಗಳಲ್ಲಿ ಸರ್ಕಾರ ನಿಗದಿ ಪಡಿಸಿದ ದರದಲ್ಲಿಯೇ ಡೆಂಗ್ಯು ಪರೀಕ್ಷೆಯನ್ನು ಕೈಗೊಳ್ಳುವಂತೆ ತಿಳಿಸಿದ್ದಾರೆ.

---

# ಮರವೇರಿ ಕುಳಿತ ಕರಡಿ ಸೆರೆ

## ಗದ್ದಿಕೆರೆ ಗ್ರಾಮದಲ್ಲಿ ಕರಡಿ ಪ್ರತ್ಯಕ್ಷ । ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಕ್ಕೆ ಜನರ ಮೆಚ್ಚುಗೆ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನ ಗದ್ದಿಕೆರೆಯಲ್ಲಿ ಮರವೇರಿ ಕುಳಿತ ಕರಡಿಯನ್ನು ಸೆರೆ ಹಿಡಿಯುವಲ್ಲಿ ಅರಣ್ಯಾಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಗುರುವಾರ ಬೆಳಗ್ಗೆ 6 ಗಂಟೆಗೆ ಗದ್ದಿಕೆರೆ ಗ್ರಾಮದ ಛಲವಾದಿ ಓಣಿಯಲ್ಲಿ, ಪ್ರತ್ಯಕ್ಷವಾದ ಕರಡಿಯನ್ನು ನೋಡಿದ ನಿವಾಸಿಗಳು ಭಯಬೀತರಾಗಿದ್ದರು. ಗ್ರಾಮದ ಸಾರ್ವಜನಿಕರ ಕೂಗಾಟ, ಚೀರಾಟದಿಂದ ಕರಡಿ ಅಲ್ಲೇ ಪಕ್ಕದಲ್ಲಿದ್ದ ಮರವನ್ನೇರಿ ಕುಳಿತುಕೊಂಡಿತು. ಅರಣ್ಯಾಧಿಕಾರಿ ಗಳಿಗೆ ಮಾಹಿತಿ ನೀಡಿದ ಬಳಿಕ, ಸ್ಥಳಕ್ಕೆ ಆಗಮಿಸಿದ ತಾಲೂಕಿನ ಉಪ ವಲಯ ಅಧಿಕಾರಿಗಳು, ಹಡಗಲಿಯ ವಲಯ ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಕರಡಿ ಹಿಡಿಯುವ ಕಾರ್ಯಾಚರಣೆ ಆರಂಭಿಸಿದರು. ಕರಡಿಗೆ ಅರವಳಿಕೆ ಔಷಧಿ ನೀಡುವ ಮೂಲಕ ಬಲೆಹಾಕಿ ಮರದಿಂದ ಕೆಳಗಿಳಿಸಿ, ಅದಕ್ಕೆ ಕುತ್ತಿಗಿಯ ಸುತ್ತ ಗಾಯವಾಗಿದ್ದಕ್ಕೆ ಚಿಕಿತ್ಸೆ ನೀಡಿದರು.





ಕರಡಿ ಹಿಡಿದ ಬಳಿಕ ಗ್ರಾಮದವರು ನಿಟ್ಟುಸಿರು ಬಿಟ್ಟರು. ಬಳಿಕ ತಾಲೂಕು ಉಪ ವಲಯ ಅರಣ್ಯಾಧಿಕಾರಿ ಕರಿಬಸಪ್ಪ ಮಾತನಾಡಿ, ಬಹುತೇಕ ಪಟ್ಟಣದಲ್ಲಿ ಕಾಣಿಸಿಕೊಂಡ ಕರಡಿ ಇರಬಹುದು ಆದರೆ, ಅದೇ ಎಂದು ಹೇಳಲಿಕ್ಕೆ ಆಗದು. ಬಹುತೇಕ ಕರಡಿಗಳ ಹಿಂಡಿನಿಂದ ಬೇರ್ಪಟ್ಟ ಹೆಣ್ಣು ಕರಡಿ ಊರೊಳಗೆ ಸೇರಿಕೊಂಡಿದೆ. ಆಕಸ್ಮಿಕ ಕುತ್ತಿಗೆಗೆ ತಂತಿ ಸುತ್ತುವರೆದು ಗಾಯವಾಗಿದ್ದು ವೈದ್ಯರು ಚಿಕಿತ್ಸೆ ನೀಡಿದ್ದಾರೆ. ಈಗ ಸೆರೆ ಹಿಡಿದಿರುವ ಕರಡಿಯನ್ನು, ನಮ್ಮ ಮೇಲಾಧಿಕಾರಿಗಳಾದ ಹೊಸಪೇಟೆಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಪ್ರದೇಶಿಕ ಅರಣ್ಯ ಜಿಲ್ಲಾ ವಿಭಾಗದ ಅಧಿಕಾರಿ ಹರ್ಷಲ್‌ರವರ ಮಾರ್ಗ ದರ್ಶನದಂತೆ ದರೋಜಿ ಕರಡಿಧಾಮ ಅಥವಾ ಗುಡೇಕೋಟೆ ಕರಡಿಧಾಮಕ್ಕೆ ಬಿಡಲಾಗುವುದು ಎಂದರು.

ಈ ವೇಳೆ ಹಡಗಲಿಯ ವಲಯ ಅರಣ್ಯಾಧಿಕಾರಿ ರೇಣುಕಾ, ಹಡಗಲಿಯ ಉಪ ವಲಯ ಅರಣ್ಯಾಧಿಕಾರಿಗಳಾದ ತಿರುಮಲೇಶ, ಸಾಗರ್, ಶ್ರೀಕಾಂತ್, ರಾಮು, ಹಂಪಿ ಜೂ ವೈದ್ಯಾಧಿಕಾರಿ ವಾಣಿ ಮತ್ತು ತಂಡದವರ, ಅರಣ್ಯ ರಕ್ಷಕರಾದ ರಾಜೇಂದ್ರ ಕುಮಾರ್, ಮಂಜುನಾಥ, ವೀಕ್ಷಕರಾದ ನಾಗರಾಜ್, ಮಂಜುನಾಥ, ಮಲ್ಲಿಕಾರ್ಜುನ ಸೇರಿ ದಂತೆ ಅನೇಕರು ಇದ್ದರು.

---

# ಗ್ರಾಮ ಸಹಾಯಕರ ಹುದ್ದೆಗೆ ಅರ್ಜಿ ಅಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ಬ್ಯಾಲಕುಂದಿ ಗ್ರಾಮದಲ್ಲಿ ಖಾಲಿ ಇರುವ ಗ್ರಾಮ ಸಹಾಯಕರ 1 ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಜುಲೈ 17ರ ಸಂಜೆ 5.30ರೊಳಗಾಗಿ ಅರ್ಜಿ ಭರ್ತಿ ಮಾಡಿ ಅರ್ಜಿ ಜೊತೆಗೆ ಡಿಡಿಯನ್ನು ನೇರವಾಗಿ ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ.

ಮೀಸಲಾತಿ ವರ್ಗ ಮತ್ತು ಅರ್ಜಿ ಶುಲ್ಕ: ಪ್ರವರ್ಗ 2ಎ, ಪ್ರವರ್ಗ 2ಬಿ, ಪ್ರವರ್ಗ 3ಎ, ಪ್ರವರ್ಗ 3ಬಿ ಮತ್ತು ಸಾಮಾನ್ಯ ವರ್ಗದವರಿಗೆ 200 ರೂ. ಇರುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗದವರಿಗೆ 100 ರೂ. ಇರುತ್ತದೆ. ಶುಲ್ಕವನ್ನು ನೇರವಾಗಿ ಹೊಸಪೇಟೆ ತಾಲ್ಲೂಕು >>4

---

**ಅರಣ್ಯ ಇಲಾಖೆಯಿಂದ ವನಮಹೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಎಚ್.ಆರ್.ಗವಿಯಪ್ಪ ಕರೆ**

# ವಿದ್ಯಾರ್ಥಿಗಳು ಪರಿಸರ ಪ್ರೇಮಿಗಳಾಗಿ



**ಹಂಪಿ ಟೈಮ್ಸ್ ಹೊಸಪೇಟೆ**

ಭವಿಷ್ಯದ ಆರೋಗ್ಯಯುತ ಬದುಕಿಗೆ ವಿದ್ಯಾರ್ಥಿಗಳು ಪರಿಸರ ಪ್ರೇಮಿಗಳಾಗಬೇಕು. ಪರಿಸರವನ್ನು ನಿರ್ಲಕ್ಷಿಸಿದೆ, ಸಂರಕ್ಷಿಸಿದರೆ ಬದುಕು ಸುಂದರವಾಗಲಿದೆ ಎಂದು ಶಾಸಕ ಎಚ್.ಆರ್. ಗವಿಯಪ್ಪ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಹೊಸಪೇಟೆಯ ವಿಜಯನಗರ ಪ್ರಾದೇಶಿಕ ಅರಣ್ಯ ವಿಭಾಗ, ಪ್ರಾದೇಶಿಕ ಅರಣ್ಯ ವಲಯ, ಸಾಮಾಜಿಕ ಅರಣ್ಯ ವಲಯ ಇವರ ಸಹಯೋಗದಲ್ಲಿ ಗುರುವಾರ ಜಂಬುನಾಥನಹಳ್ಳಿ ಗುಡ್ಡದ ಹತ್ತಿರ ಆಯೋಜಿಸಲಾಗಿದ್ದ ವನಮಹೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪರಿಸರ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ. ಪರಿಸರದಿಂದ ನಮಗೆ ಉತ್ತಮವಾದ ಆಮ್ಲಜನಕ ದೊರೆಯುತ್ತದೆ. ಪರಿಸರ ಉಳಿದರೆ ಮಾತ್ರ ನಾವು ಬದುಕಲು ಸಾಧ್ಯ. ಒಬ್ಬರು ವರ್ಷಕ್ಕೆ 5 ಗಿಡಗಳನ್ನಾದರು ನೆಡಬೇಕು ಎಂದರು.

ಬಳ್ಳಾರಿಯ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ರವಿ. ಜೆ ಮಾತನಾಡಿದರು, ತಾಯಿಯ ಹೆಸರಲ್ಲಿ ಗಿಡ ನೆಟ್ಟರೆ ಆ ಮರಗಳು ಸಮೃದ್ಧಿಯಾಗಿ ಬೆಳೆಯುತ್ತವೆ. ಹೆಚ್ಚು ಹೆಚ್ಚು ಮರಗಳಿದ್ದರೆ ಪರಿಸರ ಸುಂದರವಾಗಿ ಕಾಣುತ್ತದೆ ಹಾಗೂ ಉತ್ತಮವಾದ ಗಾಳಿಯು ನಮಗೆ ಸಿಗುತ್ತದೆ ಎಂದು ಹೇಳಿದರು.

ಪರಿಸರಕ್ಕೆ ಸಂಬಂಧಿಸಿದಂತೆ ಚರ್ಚಿಸಲು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗಿತ್ತು. ಅನೇಕ ವಿದ್ಯಾರ್ಥಿಗಳು ಪರಿಸರಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅಧಿಕಾರಿಗಳಿಗೆ ಕೇಳಿ ಹೆಚ್ಚಿನ ಮಾಹಿತಿ ಪಡೆದುಕೊಂಡರು. >>4

---





## ವಿಜ್ಞಾನ

# ಮಳೆಗಾಲದಲ್ಲಿ ನೀರಿನ ಮೇಲೆ ಬಿದ್ದ ತೈಲವು ಏಕೆ ವರ್ಣ ರಂಜಿತವಾಗಿ ಕಾಣುತ್ತದೆ?

■ **ಆರ್.ಬಿ.ಗುರುಬಸವರಾಜ**

ಮಳೆಗಾಲದಲ್ಲಿ ಶಾಲೆಯಿಂದ ಮನೆಗೆ ಹೊರಟ್ಟಿದ್ದ ಪ್ರಶಾಂತ, ರಸ್ತೆಯ ಪಕ್ಕ ನಿಂತಿದ್ದ ನೀರಿನ ಮೇಲೆ ತೈಲವು ರಚಿಸಿದ ವರ್ಣರಂಚಿತ ಚಿತ್ರವನ್ನು ನೋಡುತ್ತಾ ನಿಂತಿದ್ದ. ಜೋರಾಗಿ ಬಂದ ಕಾರೊಂದು ರಸ್ತೆಯ ನೀರಿನ ಮೇಲೆ ಹಾದು ಹೋಯಿತು. ರಸ್ತೆಯಲಿದ್ದ ನೀರು ಪಕ್ಕದಲ್ಲಿದ್ದ ನೀರಿಗೆ ತಾಕಿ ಅದರಲ್ಲಿ ಅಲೆಗಳು ಎದ್ದವು. ತೈಲವು ನೀರಿನ ಮೇಲೆ ತೇಲುತ್ತಾ ತೇಲುತ್ತಾ ಮತ್ತೆ ಒಂದುಗೂಡಿ ವರ್ಣರಂಜಿತ ಚಿತ್ರ ನಿರ್ಮಿಸಿದವು. ಇದನ್ನೆ ಆಲೋಚಿಸುತ್ತಾ ಬಂದ ಪ್ರಶಾಂತ ಮನೆಯ ಕಪಾಟಿನಲ್ಲಿದ್ದ ಪುಸ್ತಕ ತೆಗೆದು ನೀರಿನ ಮೇಲೆ ಬಿದ್ದ ತೈಲವು ವರ್ಣರಂಜಿತವಾಗಿ ಕಾಣಲು ಕಾರಣ ತಿಳಿದುಕೊಂಡ.



ವಾಹನಗಳು ಅಥವಾ ಇನ್ನಿತರೇ ವಸುಗಳಿಂದ ಸೋರಿಕೆಯಾದ ತೈಲವು ನೀರಿನೊಂದಿಗೆ ಬೆರೆತಾಗ ಸೂರ್ಯನ ಬೆಳಕಿನಲ್ಲಿ ವರ್ಣರಂಜಿತ ದೃಶ್ಯವನ್ನು ನಿರ್ಮಿಸುತ್ತದೆ. ನೀರಿನ ಮೇಲ್ಮೈಯಲ್ಲಿರುವ ತೈಲವು ತೆಳುವಾದ ಪದರವನ್ನು ನಿರ್ಮಿಸುತ್ತದೆ. ಈ ಪದರದ ಮೂಲಕ ಬೆಳಕು ಹಾದುಹೋದಾಗ, ಬೆಳಕಿನ ಕೆಲವು ಕಿರಣಗಳು ಪದರದ ಮೇಲಿನ ಮೇಲ್ಮೈಯಿಂದ ಪ್ರತಿಫಲಿಸುತ್ತದೆ. ಆದರೆ ಕೆಲವು ಕಿರಣಗಳು ಪದರದ ಮೂಲಕ ಹಾದುಹೋಗುತ್ತದೆ ಮತ್ತು ಕೆಳಗಿನ ಮೇಲ್ಮೈಯಿಂದ ಪ್ರತಿಫಲಿಸುತ್ತದೆ. ಆಗ ವರ್ಣರಂಜಿತ ಚಿತ್ರವು ಕಾಣುತ್ತದೆ. ಬೆಳಕಿನ ವಿವಿಧ ತರಂಗಾಂತರಗಳು ರಚನಾತ್ಮಕವಾಗಿ ಮಧ್ಯಪ್ರವೇಶಿಸುವುದರಿಂದ ಇದು ವಿಭಿನ್ನ ಬಣ್ಣಗಳ ಗೋಚರಿಸುವಿಕೆಗೆ ಕಾರಣವಾಗುತ್ತದೆ.

ಮಳೆಗಾಲದಲ್ಲಿ ನೀರಿನ ಮೇಲ್ಮೈ ಒತ್ತಡವು ಕಡಿಮೆಯಾಗಿರುತ್ತದೆ. ಗಾಳಿಯು ಹೆಚ್ಚು ಆರ್ದ್ರವಾಗಿರುತ್ತದೆ. ಗಾಳಿಯು ಆರ್ದ್ರವಾಗಿರುವಾಗ, ನೀರಿನ ಮೇಲ್ಮೈ ಮೇಲೆ ತೈಲವು ಸಾಂದ್ರೀಕರಣಗೊಳ್ಳುತ್ತವೆ. ಇದರಿಂದ ತೈಲವು ಸುಲಭವಾಗಿ ಹರಡುತ್ತದೆ ಮತ್ತು ಮೇಲ್ಮೈಯಲ್ಲಿ ತೆಳುವಾದ ಪದರವನ್ನು ರೂಪಿಸುತ್ತದೆ. ತೈಲದಲ್ಲಿನ ಪದರಕ್ಕನುಗಣವಾಗಿ ವಿಭಿನ್ನ ವರ್ಣಗಳು ಗೋಚರಿಸುತ್ತವೆ. ತೆಳುವಾದ ಪದರಗಳು ಕೆಂಪು ಮತ್ತು ಹಳದಿಗಳಂತಹ ಗಾಢವಾದ ಬಣ್ಣಗಳನ್ನು ಉತ್ಪಾದಿಸುತ್ತವೆ. ದಪ್ಪವಾದ ಪದರಗಳು ನೀಲಿ ಮತ್ತು ಹಸಿರುಗಳಂತಹ ಗಾಢ ಬಣ್ಣಗಳನ್ನು ಉತ್ಪಾದಿಸುತ್ತವೆ.

ತೈಲವು ನಯವಾಗಿ ಸುಂದರವಾಗಿ ಕಂಡರೂ, ಅದು ಪರಿಸರಕ್ಕೆ ಹಾನಿಕಾರಕ ಮತ್ತು ಜಲಚರಗಳ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತವೆ. ಒಂದು ವೇಳೆ ಜಲಮೂಲಗಳಾದ ಕೆರೆ, ಬಾವಿ, ನದಿ, ಸಾಗರಗಳಲ್ಲಿ ತೈಲದ ಅಂಶಗಳು ಕಂಡುಬಂದರೆ ಸೂಕ್ತ ಅಧಿಕಾರಿಗಳಿಗೆ ತಿಳಿಸುವ ಮೂಲಕ ಜಲಚರಗಳನ್ನು ಕಾಪಾಡಬಹುದು.

## ಮಕ್ಕಳು ಅರಸರಾಗಬೇಕೆ?

ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣೆಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬದುಕಿನಲ್ಲಿ ಯೋಗ-ಯೋಗ್ಯತೆಗಳಿದ್ದರೆ...

ಬದುಕು ಅಂದುಕೊಂಡಷ್ಟು ಸರಳವಿಲ್ಲ. ಅಂದುಕೊಳ್ಳುವುದು ಒಂದು, ಆಗುವುದೇ ಇನ್ನೊಂದು. ಇದು ಎಲ್ಲರಿಗೂ ಅನುಭವಕ್ಕೆ ಬಂದಿರುತ್ತದೆ. ಹಾಗೆಯೇ ಮನುಷ್ಯನಿಗೆ ಅದೃಷ್ಟ-ಅವಕಾಶ, ಗೊತ್ತು-ಗುರಿ, ಸ್ಥಾನ-ಮಾನ, ವಿದ್ಯೆ-ಬುದ್ಧಿ ಇತ್ಯಾದಿಗಳಂತೆ ಯೋಗ-ಯೋಗ್ಯತೆ ಇರಬೇಕು. ಇವೆರೆಡೂ ಕ್ರಮವಾಗಿ ಅಥವಾ ಒಂದಾಗಿ ಲಭಿಸುವುದು ಕಷ್ಟಸಾಧ್ಯ. ಕೆಲವರಿಗೆ ಯೋಗ ಇರುತ್ತದೆ. ಯೋಗ್ಯತೆ ಇರುವುದಿಲ್ಲ. 'ಹಲ್ಲಿದ್ದರೆ ಕಡ್ಲೆ ಇರುವುದಿಲ್ಲ ಕಡ್ಲೆ ಇದ್ದರೆ ಹಲ್ಲು ಇರುವುದಿಲ್ಲ'. ಕೆಲವರಿಗೆ 'ಯೋಗ್ಯತೆ' ಇರುತ್ತದೆ 'ಯೋಗ' ಇರುವುದಿಲ್ಲ. ಎರಡೂ ಇದ್ದಾಗ ಅನಾಯಾಸವಾಗಿ ಹಣ, ಅಧಿಕಾರ, ಕೀರ್ತಿ ತನ್ನಿಂದ ತಾನೇ ಲಭಿಸುತ್ತವೆ. ಯೋಗ್ಯತೆಯಿಂದ ವ್ಯಾಪಾರ ಮಾಡಿ ಅಥವಾ ಭಾರೀ ಹುದ್ದೆಯಿಂದ ಹಣದ ಗಳಿಕೆ ಸಹಜವಾಗಿರುತ್ತದೆ. ಆದರೆ ಹಣವನ್ನು ಸರಿಯಾದ ಕ್ರಮದಲ್ಲಿ ಆರೋಗ್ಯಕರವಾಗಿ ವಿನಿಯೋಗ ಮಾಡದೇ ಅನಾವಶ್ಯಕವಾಗಿ ಖರ್ಚು ಮಾಡಿ ವ್ಯಕ್ತಿತ್ವ ಹಾಳು ಮಾಡಿಕೊಳ್ಳುವುದುಂಟು.

ದುರ್ಯೋಧನ ಯುದ್ಧದಲ್ಲಿ ಗೆದ್ದು ರಾಜ್ಯ ಸಂಪಾದನೆ ಮಾಡುವ ಯೋಗ್ಯತೆ ಇದ್ದರೂ ಕೊನೆಯಲ್ಲಿ ಅದನ್ನು ಅನುಭವಿಸುವ ಯೋಗ ಕೂಡಿ ಬರಲಿಲ್ಲ. ರಾಜ್ಯಾಧಿಕಾರವಿದ್ದರೂ ಎಲ್ಲರನ್ನೂ ಕಳೆದುಕೊಂಡು ಅನಾಥನಾಗಿ ಪಶ್ಚಾತ್ತಾಪದಲ್ಲಿ ಬೇಯಬೇಕಾಯ್ತು. ಧರ್ಮರಾಯನಿಗೆ ಯೋಗ್ಯತೆವಿದ್ದುದರಿಂದ ಯುದ್ಧದಲ್ಲಿ ಗೆಲ್ಲುವುದಲ್ಲದೆ, ಯೋಗ ವಿದ್ದುದರಿಂದ ಸ್ವರ್ಗಸುಖ ಅನುಭವಿಸುವ ಅವಕಾಶವೂ ಒದಗಿಬಂತು.

**ಜನಪದರು ಹೇಳಿದಂತೆ:** "ಬುದ್ಧಿ ಭೂಮಿ ಆಳುತ್ತೇನೆಂದರೆ, ಅದೃಷ್ಟ ಕತ್ತೆ ಕಾಯುತ್ತಂತೆ" ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯ ವಾಗುವುದಿಲ್ಲ. ಬುದ್ಧಿ ವಂತಿಕೆಯ ಯೋಗ್ಯತೆ ಯಿಂದ ಸಾಕಷ್ಟು ಗಳಿಸಿದ ಶ್ರೀಮಂತನೊಬ್ಬ ಯಾರಿಗೂ ದಾನಧರ್ಮ ಮಾಡು ತ್ತಿರಲಿಲ್ಲ. ಜಿಪುಣತನ ದಿಂದ ಜೀವನ ಸಾಗಿಸುತ್ತಿದ್ದ. ಒಂದು ದಿನ ಅವನಿಗೆ ವಾಸಿಯಾಗದ ರೋಗ ವೊಂದು ದೇಹದ ತುಂಬಾ ಆವರಿಸಿತು. ಸಾಕಷ್ಟು ಹಣ ಖರ್ಚು ಮಾಡಿ ನೂರಾರು ವೈದ್ಯರಿಗೆ ತೋರಿಸುವ ಯೋಗ್ಯತೆ ಇದ್ದರೂ ಆರೋಗ್ಯದಲ್ಲಿ ಬದಲಾವಣೆ ಕಿಂಚಿತ್ತೂ ಕಾಣುತ್ತಿರಲಿಲ್ಲ. ಮನೆತುಂಬಾ ಆಳುಕಾಳು, ಆಹಾರಧಾನ್ಯ, ಪದಾರ್ಥಗಳಿದ್ದರೂ ಹೊಟ್ಟೆತುಂಬಾ ಊಟ ಮಾಡುವ ಯೋಗವಿರಲಿಲ್ಲ. ಕೊನೆಗೆ ಒಂದು ದಿನ ಮರಣವನ್ನಪ್ಪಿದ. ಊರ ಜನರೆಲ್ಲಾ 'ಈ ಶ್ರೀಮಂತ ಯೋಗ್ಯತೆಯಿಂದ ಹಣ ಗಳಿಕೆ ಮಾಡಿದ್ದರೂ, ಊಟ ಮಾಡುವ ಯೋಗ ಪಡೆದಿರಲಿಲ್ಲ' ಎಂದು ಆಡಿಕೊಳ್ಳತೊಡಗಿದರು.



ಡಾ. ರಾಜಶೇಖರ ಜಮದಂಡಿ,
ಲೇಖಕರು ಮೊ: 9448441471

Hampi Times E-paper
SCAN AND READ



ಭೂಮಿಗೆ ಬರುವುದು ಪ್ರತಿಯೊಬ್ಬರಿಗೂ ಆಕಸ್ಮಿಕವಾಗಿದ್ದರೂ ಹೋಗುವುದು ಮಾತ್ರ ನಿಶ್ಚಿತ. ಈ ಬಂದು-ಹೋಗುವ ಮಧ್ಯದಲ್ಲಿ ಗಳಿಸಿದ್ದರಲ್ಲಿ ಸ್ವಲ್ಪ ಕೊಡುವ ಭಾವನೆ ಬೆಳೆಸಿಕೊಳ್ಳಬೇಕು. ಬಹಿರಂಗದ ವಸ್ತುಗಳು ನಮ್ಮ ಯೋಗ್ಯತೆಗೆ ಪೂರಕವಾಗಿರುತ್ತವೆ. ಹಾಗೆಯೇ ಅಂತರಂಗದಲ್ಲಿ ನಾವು ಅನುಸರಿಸುವ ಒಳ್ಳೆತನ, ದಾನ-ಧರ್ಮಗಳು ನಮ್ಮ ಯೋಗಕ್ಷೇಮಕ್ಕೆ ದಾರಿಯಾಗಿರುತ್ತವೆ. ಹಾಗಾಗಿ ಸಾಧ್ಯವಾದಷ್ಟು ಮಾನವೀಯ ನೆಲೆಯಲ್ಲಿ ಬದುಕು ಕಟ್ಟಿಕೊಳ್ಳೋಣ.

# ಕಲರ್ಸ್‌ನಲ್ಲಿ ಹೊಸ ಧಾರಾವಾಹಿ ನನ್ನದೇವ್ರು

### ಜು. 8ರಿಂದ ನಿತ್ಯಸಂಜೆ 6:30ಕ್ಕೆ ಪ್ರಸಾರ | ಅಶ್ವಿನಿ ನಕ್ಷತ್ರ ಖ್ಯಾತಿಯ ಮಯೂರಿ ಮರಳಿ ಕಿರುತೆರೆಗೆ




ಕೌಟುಂಬಿಕ ಮೌಲ್ಯಗಳನ್ನು ಬಿಂಬಿಸುವ ಸದಭಿರುಚಿಯ ಧಾರಾವಾಹಿಗಳಿಗೆ ಹೆಸರಾದ ಕಲರ್ಸ್ ಕನ್ನಡ ಇದೀಗ 'ನನ್ನದೇವ್ರು' ಎಂಬ ಹೊಸ ಕತೆಯನ್ನು ಹೊತ್ತುತಂದಿದೆ. ಜುಲೈ 8, 2024ರಿಂದ ಪ್ರಸಾರ ಆರಂಭಿಸಲಿರುವ ಈ ಹೊಸಧಾರಾವಾಹಿಯನ್ನು ನೀವು ಸೋಮವಾರದಿಂದ ಶುಕ್ರವಾರದತನಕ ಪ್ರತಿ ಸಂಜೆ 6.30 ರಿಂದ ವೀಕ್ಷಿಸಬಹುದು.

'ನನ್ನದೇವ್ರು' ಧಾರಾವಾಹಿಯ ವಿಶೇಷವೆಂದರೆ "ಅಶ್ವಿನಿನಕ್ಷತ್ರ' ದಿಂದ ಮನೆಮಾತಾಗಿದ್ದ ಮಯೂರಿ ಮತ್ತೆ ಕಿರುತೆರೆಗೆ ಮರಳಿರುವುದು. ಈ ಧಾರಾವಾಹಿಯಲ್ಲಿ ಮಯೂರಿಯದು ಸಣ್ಣ ಊರಿನ ಬಡ ನರ್ಸ್‌ಪಾತ್ರ. ಊರೇ ಮೆಚ್ಚುವ ಉದ್ಯಮಿ ಸಚ್ಚಿದಾನಂದ ಅವರಿಗೆ ಸೇರಿದ ಆಸ್ಪತ್ರೆಯೊಂದರಲ್ಲಿ ಕೆಲಸಮಾಡುವ ಬಡಹುಡುಗಿ ಮಯೂರಿ. ಜನಾನುರಾಗಿ ಸಚ್ಚಿದಾನಂದರ 20ವರ್ಷದ ಮಗಳಿಗೆ ಅಪ್ಪನನ್ನು ಕಂಡರೆ ಇಷ್ಟವಿಲ್ಲ. ತನ್ನಿಂದ ದೂರಾಗಿಬದುಕುತ್ತಿರುವ ಮಗಳ ವಿಶ್ವಾಸವನ್ನು ಮರಳಿಗಳಿಸಿಕೊಳ್ಳಲು ಹಲುಬುತ್ತಿರುವ ಸಚ್ಚಿದಾನಂದ ಅವರ ಬದುಕಿನಲ್ಲಿ ಮಯೂರಿಯ ಪ್ರವೇಶವಾಗುತ್ತದೆ. ತಾನು ಆರಾಧಿಸುವ ಸಚ್ಚಿದಾನಂದ್ವಾಳನ್ನು ಸರಿದಾರಿಗೆ ತರುವಹಾದಿಯಲ್ಲಿ ಮಯೂರಿ ಎದುರಿಸುವ ಸವಾಲುಗಳೇನು ಎಂಬುದೇ ಮುಂದಿನ ಕತೆ. ಸುತ್ತಲಿನವರ ಸಂಚುಗಳಿಂದ ಮಯೂರಿ ಹೇಗೆ ಸಚ್ಚಿದಾನಂದರನ್ನು ಕಾಪಾಡುತ್ತಾಳೆ ಎಂಬುದೇ ಕುತೂಹಲ.

'ಅಶ್ವಿನಿನಕ್ಷತ್ರ'ದಿಂದ ಹೆಸರಾದ ಮಯೂರಿ ತುಂಬಾ ವರ್ಷಗಳ ನಂತರ ಟಿವಿಗೆ ಮರಳಿ 'ನನ್ನದೇವ್ರು' ನಾಯಕಿಯಾಗಿದ್ದಾರೆ. ನಾಯಕನಾಗಿ ನಟಿಸುತ್ತಿರುವ ಅವಿನಾಶ್ದಿವಾಕ ಹಾಸ್ಯ ಚಕ್ರವರ್ತಿ ನರಸಿಂಹರಾಜು ಅವರ ಮೊಮ್ಮಗ ಅನ್ನುವುದು ಇನ್ನೊಂದು ವಿಶೇಷ. ಇವರೊಂದಿಗೆ ಯುಕ್ತಾಮಲ್ನಾಡ್, ಸ್ವಾತಿ, ವಿ. ಮನೋಹರ್, ರೇಖಾದಾಸ್, ನಿಶ್ಚಿತಾಗೌಡ, ಮಾಲತಿಸುಧೀರ್, ಯಮುನಾಶ್ರೀನಿಧಿ, ರವಿಬ್ರಹ್ಮ, ಅಭಿಷೇಕ್ಶ್ರೀಕಾಂತ್... ಹೀಗೆ 'ನನ್ನದೇವ್ರು' ತಾರಾಗಣದಲ್ಲಿ ಜನಪ್ರಿಯ ನಟನಟಿಯರು ತುಂಬಾ ಮಂದಿ ಇದ್ದಾರೆ.

ಈ ಮೊದಲು 'ಒಲವಿನನಿಲ್ದಾಣ' ಧಾರಾವಾಹಿಯನ್ನು ನಿರ್ಮಿಸಿದ್ದ ಶ್ರುತಿನಾಯ್ಡು ಅವರು 'ನನ್ನದೇವ್ರು' ಧಾರಾವಾಹಿಯ ನಿರ್ಮಾಪಕಿ. ಇತ್ತೀಚಿಗೆ ಬೆಳ್ಳಿ ತೆರೆಯ ಮೇಲೆ ಖಳನಟನಾಗಿಗ ಮನಸೆಳೆಯುತ್ತಿರುವ ರಮೇಶ್ ಇಂದಿರಾ 'ನನ್ನದೇವ್ರು' ಧಾರಾವಾಹಿಯನ್ನು ನಿರ್ದೇಶಿಸುತ್ತಿದ್ದಾರೆ.

ಈ ಹೊಸಧಾರಾವಾಹಿ ಬಗ್ಗೆ ಉತ್ಸುಕತೆ ತೋರಿದ ಕಲರ್ಸ್ ಕನ್ನಡದ ಬ್ಯುಸಿನೆಸ್ ಹೆಡ್ ಶಾಂತಾನಾಯಕ ಮಾತನಾಡಿ, 'ಸದಾಹೊಸತನಕ್ಕಾಗಿ ದುಡಿಯುವ ಕಲರ್ಸ್ ಕನ್ನಡ ವಾಹಿನಿಯು ಈ ಹೊಸ ಧಾರಾವಾಹಿಯ ಮೂಲಕ ಮುಗ್ಧತೆ ಮತ್ತು ಪ್ರಾಮಾಣಿಕತೆ ತಂದೊಡ್ಡುವ ಸವಾಲುಗಳ ಕತೆಯೊಂದನ್ನು ವೀಕ್ಷಕರಿಗೆ ಉಣಬಡಿಸಲಿದೆ' ಎಂದು ಹೇಳಿದರು.

ಕಲರ್ಸ್ ಕನ್ನಡದ ವಾಹಿನಿಯಲ್ಲಿ ಜುಲೈ 8ರಂದು ಸಂಜೆ 6.30ಕ್ಕೆ 'ನನ್ನದೇವ್ರು' ಧಾರಾವಾಹಿಯ ಮೊದಲ ಕಂತು ಪ್ರಸಾರವಾಗಲಿದೆ. ಇದನ್ನು ನೀವು ಜಿಯೋಸಿನಿಮಾ ಮೂಲಕ ನಿಮ್ಮ ಫೋನಿನಲ್ಲೂ ನೋಡಬಹುದು ಎಂದು ತಿಳಿಸಿದ್ದಾರೆ.

# ಪಿಹೆಚ್‌ಡಿ ಸಂಶೋಧನಾ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

■ **ಹಂಪಿ ಟೈಮ್ಸ್ ಹೊಸಪೇಟೆ**

2024-25ನೇ ಸಾಲಿನಲ್ಲಿ ಪೂರ್ಣ ಕಾಲಿಕವಾಗಿ ಪಿಹೆಚ್‌ಡಿ ಸಂಶೋಧನೆ ಕೈಗೊಳ್ಳುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ (ಜೆಆರ್‌ಎಫ್) ಮಾದರಿ ಫೆಲೋಶಿಪ್ ಪ್ರೋತ್ಸಾಹ ಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಇಚ್ಚಿಸುವ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದವರಾಗಿರಬೇಕು (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್, ಪಾರ್ಸಿ)., ಸರ್ಕಾರಿ-ಖಾಸಗಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುವುದಿಲ್ಲ., ವಾರ್ಷಿಕ ಆದಾಯವು 8 ಲಕ್ಷ ರೂ. ಗಳನ್ನು ಮೀರಿರಬಾರದು., ವಿದ್ಯಾರ್ಥಿಯ ಗರಿಷ್ಠ ವಯೋಮಿತಿ 35 ವರ್ಷ ಮೀರಬಾರದು., ಕೋರ್ಸ್ ಪೂರ್ಣ ಕಾಲಿಕವಾಗಿಬೇಕು. ಹೆಚ್ಚಿನ ಮಾಹಿತಿಗಾಗಿ http://dom.karnataka.gov.in ಅನ್ನು ವೀಕ್ಷಿಸಿ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.

# ಡೆಂಗ್ಯೂ ನಿಯಂತ್ರಣಕ್ಕೆ ಜಾಗೃತಿ ಮೂಡಿಸಿ

### ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಶಿವಾನಂದ ವ್ಹಿ.ಪಿ. ಹೇಳಿಕೆ



■ **ಹಂಪಿ ಟೈಮ್ಸ್ ಕೊಪ್ಪಳ**

ಡೆಂಗ್ಯೂ ನಿಯಂತ್ರಣ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಈ ಖಾಯಿಲೆಯ ನಿಯಂತ್ರಣಕ್ಕೆ ಎಲ್ಲರಲ್ಲಿಯೂ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶಿವಾನಂದ ವ್ಹಿ.ಪಿ. ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಚೇರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮುರಾರ್ಜಿ ದೇಸಾಯಿ ವಸತಿ ಶಾಲೆ, ಬೇವೂರು ಇವರ ಸಂಯುಕ್ತಾಶ್ರಯದಲ್ಲಿ "ಡೆಂಗ್ಯೂ ಖಾಯಿಲೆ ನಿಯಂತ್ರಣ" ಕುರಿತು ಶಾಲೆಯ ಸಭಾ ಆವರಣದಲ್ಲಿ ಜುಲೈ 03ರಂದು ಹಮ್ಮಿಕೊಳ್ಳಲಾಗಿದ್ದ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಮಳೆಗಾಲ ಪ್ರಾರಂಭವಾದ ಕಾರಣ ಶುದ್ಧ ನೀರಿನಲ್ಲಿ ಸೋಂಕಿತ ಈಡಿಸ್ ಜಾತಿಯ ಸೊಳ್ಳೆಗಳು ಮೊಟ್ಟೆಗಳನ್ನಿಟ್ಟು ಸಂತಾನಾಭಿವೃದ್ಧಿ ಮಾಡುತ್ತವೆ. ನಂತರ ಮನುಷ್ಯರಿಗೆ ಕಚ್ಚುವುದರಿಂದ ಈ ಖಾಯಿಲೆ ಹರಡುತ್ತದೆ. ಈ ರೋಗದ ಲಕ್ಷಣಗಳು ತಲೆನೋವು, ವಾಂತಿ, ಕಣ್ಣಿನ ಹಿಂಭಾಗದಲ್ಲಿ ನೋವು, ಮೈಮೇಲೆ ಬಿಲ್ಲೆ ಹಾಕಾರದ ಕೆಪ್ಪು ಗಂಧೆಗಳು, ಕಪ್ಪು ಮಲವಿಸರ್ಜನೆ, ವಸಡುಗಳಲ್ಲಿ ರಕ್ತಸ್ರಾವ ಇಂತಹ ಲಕ್ಷಣಗಳಿದ್ದರೆ ತಮ್ಮ ಸಮೀಪದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ, ರಕ್ತ ಪರೀಕ್ಷೆ ಮಾಡಿಸಿ, ಖಚಿತ ಪಟ್ಟರೆ ಚಿಕಿತ್ಸೆ ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಜ್ವರದ ಬಗ್ಗೆ ನಿರ್ಲಕ್ಷತನ ಮಾಡಬಾರದು. ಈ ಬಗ್ಗೆ ಜಾಗೃತಿ ಮೂಡಿಸುವುದು ಡೆಂಗ್ಯೂ ಖಾಯಿಲೆ ನಿಯಂತ್ರಣ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಮನೆಯ ಸುತ್ತ ಮುತ್ತಲು ನೀರು ನಿಲ್ಲದಂತೆ ಎಚ್ಚರಿಕೆವಹಿಸಬೇಕು. ಲಾರ್ವಾ ನಾಶಕ್ಕಾಗಿ ಸ್ವಚ್ಛಗೊಳಿಸತ್ತಿರಬೇಕು. ಆರೋಗ್ಯ ಇಲಾಖೆ ಸಿಬ್ಬಂದಿಗಳು ಮತ್ತು ಆಶಾ ಕಾರ್ಯಕರ್ತೆಯರು ತಮ್ಮ ಮನೆಗೆ ಭೇಟಿ ನೀಡಿದಾಗ ಸಹಕರಿಸಿ, ಕೈಜೋಡಿಸಬೇಕು. ತಮ್ಮ ಮನೆಯ ಸುತ್ತಾ-ಮುತ್ತಾ ತ್ಯಾಜ್ಯ ವಸ್ತುಗಳಾದ ಟೈರ್, ಒರಳುಕಲ್ಲು, ತೆಗ್ಗಿನ ಚಿಪ್ಪು, ಹೊಡೆದ ಪ್ಲಾಸ್ಟಿಕ್ ಬಕೆಟ್ ಇತ್ಯಾದಿಗಳನ್ನು ಬಿಸಾಡಬಾರದು. ಸ್ವಚ್ಛತೆ ಕಾಪಾಡಬೇಕು. ಇದರ ಬಗ್ಗೆ ಎಲ್ಲಾ ವಿದ್ಯಾರ್ಥಿಗಳು ತಮ್ಮ ಮನೆ ಹಾಗೂ ಸುತ್ತಮುತ್ತಲಿನಲ್ಲಿ ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮುದಾಯಾ ಆರೋಗ್ಯಾಧಿಕಾರಿಗಳಾದ ಮಂಜುಳಾ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾದ ಉಮಾ, ಸಹಶಿಕ್ಷಕರಾದ ಪ್ರವೀಣ, ಶ್ರೀಶೈಲ ಬಡಿಗೇರ್, ಮಹಾಂತೇಶ, ಮಹಮ್ಮದ್ ಜಹೀರ್, ಅಹಮ್ಮದಪಾಷಾ, ಕೀಮಪ್ಪ ದೇವರಮನಿ ಸೇರಿದಂತೆ ಇತರೆ ಶಿಕ್ಷಕರು, ಆಶಾ ಕಾರ್ಯಾಕರ್ತೆಯರು, ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಕವಿ ಮನಸು

### ರಾಜನ ತೀರ್ಪು

ಸಿಂಹ ಮತ್ತು ಕತ್ತೆ ನಡುವೆ
ಬೆಳೆಯಲಿಲ್ಲ ಗೆಳೆತನ
ಎದುರು ಸಿಗಲು ವಕ್ರ ದೃಷ್ಟಿ
ಮನದೆ ತುಂಬಿ ಹಗೆತನ

ಬಾನ ಬಣ್ಣ ನೀಲಿ ಎಂದು
ಸಿಂಹ ನುಡಿದ ಮಾತಿದು
ನೀಲಿ ಅಲ್ಲ ಕಪ್ಪು ಎಂದು
ಕತ್ತೆ ವಾದಕಿಳಿಯಿತು

ಕೊನೆಯ ಗೊಳದ ಜಗಳವಾಗಿ
ದೂರು ರಾಜನಲ್ಲಿಗೆ
ವಿಷಯ ಕೇಳಿ ರಾಜ ನುಡಿದ
ಶಿಕ್ಷೆ ನೀಡಿ ಸಿಂಹಕೆ

ನನ್ನ ತಪ್ಪು ಏನು ರಾಜ
ಪಕ್ಷಪಾತ ಏತಕೆ
ನೀಲಿ ಬಣ್ಣ ಸತ್ಯ ತಾನೆ
ನಾನು ಗುರಿಯೆ ಶಿಕ್ಷೆಗೆ?

ಎದುರಲಿರುವ ಪ್ರಾಣಿ ಕತ್ತೆ
ಎಂಬ ವಿಷಯ ಅರಿಯದೆ
ಕತ್ತೆ ಜೊತೆಗೆ ವಾದಕಿಳಿದೆ
ನೀನು ಅರ್ಹ ಶಿಕ್ಷೆಗೆ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಓ ನನ್ನ ರೈತ ಬಂಧು

ಓ ನನ್ನ ರೈತ ಬಂಧು
ನೀನೇಕೆ ಸಾಯುತಿರುವೆ ಇಂದು
ಅನಾವೃಷ್ಟಿ ಅತೀವೃಷ್ಟಿ ಇಂದು ನಿನ್ನೆಯದಲ್ಲ
ಅನಾದಿ ಕಾಲದಿಂದಲೂ ಇದೆಯಲ್ಲ!

ಹಾಸಿಗೆ ಇದ್ದಷ್ಟು ಕಾಲು ಚಾಚಿದರೆ
ನಮ್ಮ ಸಂಸಾರಕೆ ಎಲ್ಲಿದೆ ತೊಂದರೆ
ಹೆಚ್ಚಿನ ಚಪಲಕೆ ಬಿದ್ದರೆ ಜೀವ
ಅನಭವಿಸಲೇ ಬೇಕು ಬರೀ ನೋವ!

ಹೊಟ್ಟೆ ಬಟ್ಟೆಗೆ ಹೊರೆಯಾಗದಂತೆ
ಸಾಲ ಸೂಲದಿಂದ ದೂರಾಗುವಂತೆ
ಮೈ ಮುರಿದು ದುಡಿದರೆ ಸಾಕಲ್ಲ
ಕಣ್ತುಂಬ ನಿದ್ದೆ ಸುಖವೇ ಜೀವನ!

ಹೆಚ್ಚಿನ ಆಸೆಗೆ ಬಿದ್ದರೆ ನಾವು
ದುರಾಸೆ ಹೆಚ್ಚಾಗಿ ಬದುಕಲಿ ನೋವು
ಸಂಸಾರದಲಿ ಸುಖ ಕಾಣದೇ ನಾವು
ದಾರಿ ಕಾಣದೇ ತಂದುಕೊಳ್ಳುವೆವು ನೋವು!

ಸಾಲ ಸಿಗುವುದೆಂದು ತುಪ್ಪ ತಿಂದರೆ
ಸಾಕ ತಿರಿಸಲಾಗದೇ ಜೀವಕೆ ತೊಂದರೆ
ಅಂದಿನ ಆದಾಯಕೆ ಸರಿ ದೂಗಿಸಿ ನಡೆದರೆ
ಬದುಕಿಗೆ ಬರಲಾರವು ಇಲ್ಲದ ತೊಂದರೆ!

ಈಗ ನಡೆಯುವುದೆಲ್ಲ ರಾಜಕೀಯ
ಡೊಂಬರಾಟ
ನಾವು ಆಡಬೇಕು ಒಗ್ಗಟ್ಟಿನ ಕೋಲಾಟ
ರಾಜಕಾರಣಿಗಳ ಮಾತ ನಂಬಿದರೆ ರೈತ
ಬದುಕಲಿ ನಿಜವಾಗಿ ರೈತ ಬಿದ್ದು ಸೋತ!

ಓ ನನ್ನ ಕರ್ನಾಟಕದ ರೈತ ಬಂದುವೇ
ನೀ ಚೆನ್ನಾಗಿದ್ದರೆ ಕರ್ನಾಟವೇ ಸುಂದರ
ನೀ ಕೈಲಾಗದವನಾದರೆ ಅಪಹಾಸ್ಯದ ನಗುವೆ
ಕೈ ಕೆಸರಾದರೆ ಬಾಯಿಗೆ ಮೊಸರು ಬಲು ಸುಂದರ!

ಬದುಕಿಗೆ ಆತ್ಮ ಹತ್ಯೆಯೊಂದೆ ಪರಿಹಾರವಲ್ಲ
ಮಳೆ ಬಂದರೆ ಬೆಳೆ ಬಾರದಿರೆ ಮೈ ಮುರಿದು
ದುಡಿಯಬೇಕಲ್ಲ
ಕಾಯಕವೇ ಕೈಲಾಸ ಬಸವಣ್ಣ ಹೇಳಿದ್ದು ಕೇಳು
ಬೆವರು ಸುರಿಸಿ ದುಡಿ ಸುಂದರವಾಗುವುದು
ಬಾಳು!

– ಚಂದ್ರಶೇಖರಯ್ಯ ರೋಣದಮಠ

### ಬಂಧನ

ಏಳು ಬೀಳಿನ ಜೀವನದಿ
ಬಂದಿಯಾಗಿಹೆನು ಭವ ಬಂಧನದಿ
ಸಿಲುಕಿರುವೆನು ಮೋಹ ಪಾಶದಿ
ಸೋಲು ಗೆಲುವಿರುವುದು ಬಾಳ ಪಯಣದಿ

ಕಳೆದು ಹೋಗಿರುವೆನು ಸಂಸಾರ ಸಾಗರದಿ
ಸಂತೋಷವಿರುವುದು ಪ್ರೀತಿ ತ್ಯಾಗದಿ
ಮನಗಳು ಕೂಡಿದರೆ ಸಡಗರದಿ
ಬೆಸೆಯುವುದು ಅನುರಾಗ ಸಂಬಂಧದಿ

ಸಂಬಂಧಗಳು ಆಗದಿರಲಿ ಬಂಧನ
ಬೆಸೆಯಲಿ ಅನುಬಂಧವು ಅನುದಿನ
ಇರಲಿ ಭಗವಂತ ನೆಡೆಗೆ ಧ್ಯಾನ
ಪರಿಶುದ್ಧ ಮನಸ್ಸಿದ್ದರೆ ಪಾವನ

– ಚೇತನ ಭಾರ್ಗವ ಬೆಂಗಳೂರು

# ಹೆಣ್ಣು ಮಕ್ಕಳೇ...ಸ್ವಂತಕ್ಕೆ ಸ್ವಲ್ಪ ಸಮಯ ಕೊಡಿ



ಅಯ್ಯೋ! ಮಕ್ಕಳಿನ್ನು ಚಿಕ್ಕವರು, ಮನೆ ಮತ್ತು ಮಕ್ಕಳ ಸಂಪೂರ್ಣ ಜವಾಬ್ದಾರಿ ನನ್ನದೆ.. ಹಾಗಾಗಿ ಯಾವುದೇ ರೀತಿ ಎಕ್ಸರ್ಸೈಜ್, ವಾಕಿಂಗ್, ಯೋಗ ಮಾಡೋಕಾಗಲ್ಲ.. ಏನ್ ಮಾಡ್ಲಿ ಫ್ಯಾಮಿಲಿ ಕಮಿಟ್ಮೆಂಟ್ಸ್ ಇದು ಒಬ್ಬಾಕೆಯ ಮಾತಾದರೆ ನನಗೆ ನಿಜ್ವಾಗ್ಲೂ ದಿನಕ್ಕೆ ಒಂದಿಪ್ಪತ್ತು ನಿಮಿಷ ಆದ್ರೂ ಯೋಗ ವಾಕಿಂಗ್ ಏನಾದರೂ ಮಾಡೋಕೆ ಆಸೆ ಇದೆ ಆದರೆ ನನ್ನ ಕೆಲಸ ನನ್ನ ಜವಾಬ್ದಾರಿಗಳು ನನಗೆ ಅಡ್ಡಗಾಲಾಗಿವೆ., ಐ ಯಾಮ್ ಹೆಲ್ಪ್ ಲೆಸ್... ಇದು ಮತ್ತೊಬ್ಬಾಕೆಯ ಉವಾಚ.

ನನಗೂ ಏನು ಮಾಡೋಕ್ ಆಗ್ತಾ ಇಲ್ಲ ಮಕ್ಕಳಿಗೆ ರಜೆ ಬಿಟ್ಟಿದೆ ಅಲ್ಲಿ ಇಲ್ಲಿ ಅಂತ ಪ್ರವಾಸ, ಮದುವೆ ಮುಂಜಿ ಅಂತ ಓಡಾಡ್ತಾ ಇದ್ವಿ... ಇದೀಗ ನನ್ನ ಸಂಪೂರ್ಣ ದೇಹ ನನಗೆ ಸಹಕರಿಸ್ತಾ ಇಲ್ಲ ಅಂತ ಅನ್ನಿಸ್ತಾ ಇದೆ. ಚಿಕ್ಕಂದಿನಲ್ಲಿ ನನಗೆ ಹಾಡೋಕೆ, ಡಾನ್ಸ್ ಮಾಡೋಕೆ ತುಂಬಾ ಇಷ್ಟ ಇತ್ತು, ಸಾಕಷ್ಟು ಪ್ರಶಸ್ತಿಗಳನ್ನು ಪಡ್ಕೊಂಡಿದ್ದೆ ಆದರೆ ಏನು ಮಾಡಲಿ ಈಗ ಯಾವುದನ್ನು ಮಾಡಕ್ಕಾಗ್ತಿಲ್ಲ.

ನಿಮಗೇನ್ರಿ ಕೈಗೊಬ್ರು ಕಾಲ್ಗೊಬ್ರು ಆಳು. ಆರಾಮಾಗಿ ನಡೆದು ಹೋಗುತ್ತೆ. ನಮ್ಮ ಮನೆಯಲ್ಲಿ ಕಸ ಗುಡಿಸುವುದು, ಪಾತ್ರೆ ತೊಳಿಯೋದು, ಬಟ್ಟೆ ಒಗೆಯುವುದು ಎಲ್ಲಾ ನಾನೇ ಮಾಡೋದು ಇದರಲ್ಲೇ ನನ್ನ ಎಕ್ಸರ್ಸೈಜ್ ಆಗಿ ಹೋಗುತ್ತೆ, ನನ್ನ ಕಷ್ಟ ನಿಮಗೆ ಅರ್ಥ ಆಗೋದಿಲ್ಲ.

ಹೀಗೆ ನೆವ ಹೇಳುವ ನಾರಿಯರ ಬಹು ದೊಡ್ಡ ಗುಂಪೆ ಇದೆ.ತಮ್ಮ ಸ್ವಂತಕ್ಕೆ ಸ್ವಲ್ಪವೂ ಸಮಯವನ್ನು ವ್ಯಯಿಸದ ಹೆಣ್ಣು ಮಕ್ಕಳು ನೂರಕ್ಕೆ 98ಕ್ಕೂ ಹೆಚ್ಚು ಜನ ಇರುವರು. ಇನ್ನುಳಿದ ಒಬ್ಬಿಬ್ಬರು ಹೆಣ್ಣು ಮಕ್ಕಳು ತಮ್ಮ ವೈಯಕ್ತಿಕ ಬೆಳವಣಿಗೆಯತ್ತ ಮುಖ ಮಾಡಿದ್ದರೆ "ಆಕಿಗೆ ಏನ್ರೀ ಮಕ್ಕಳ, ಮನೆಯ ಕಾಳಜಿನೇ ಇಲ್ಲ ಎಂದು ಹಂಗಿಸುತ್ತ ತಾವೇನೋ ಅತಿ ದೊಡ್ಡ ತ್ಯಾಗ ಮಾಡುತ್ತಿರುವವರಂತೆ ತೋರಿಸಿಕೊಳ್ಳುತ್ತಾರೆ. ಕುಲಕ್ಕೆ ಮೃತ್ಯು ಕೊಡಲಿಯ ಕಾವು ಎಂಬಂತೆ ಹೆಣ್ಣು ಮಕ್ಕಳಿಗೆ ಹೆಣ್ಣು ಮಕ್ಕಳೇ ಶತ್ರು ಎಂಬುದನ್ನು ಸಾಬೀತು ಮಾಡುತ್ತಾರೆ ಇಂದಿನ ಆಧುನಿಕ ಯುಗದಲ್ಲಿ ಮನೆಯಲ್ಲಿ ಮಾಡಿದ ಅಡುಗೆ ತಿಂಡಿಗಿಂತ ಹೊರಗಿನ ತಿಂಡಿಯ ಆರ್ಭಟ ತುಸು ಹೆಚ್ಚು, ಗಂಡ,ಮಕ್ಕಳು ಕೇಳ್ತಾರೆ ಅನ್ನೋದು ಮತ್ತೊಂದು ಕಾರಣ. ಬಹುಶಃ ಋತುಚಕ್ರ,ವಿವಾಹದ ನಂತರದ ಬದುಕು, ಹೆರಿಗೆ ಬಾಣಂತನ ಮಕ್ಕಳ ಪಾಲನೆ ಪೋಷಣೆಗಳಲ್ಲಿ ಹೆಣ್ಣು ಮಕ್ಕಳ ದೈಹಿಕ, ಮಾನಸಿಕ ಸ್ಥಿತಿಗತಿಗಳಲ್ಲಿ ಅಪಾರ ವ್ಯತ್ಯಾಸವಾಗುವುದು ಸಹಜ. ಆದರೆ ಅಷ್ಟೇ ಸಹಜವಾಗಿ ಅವರು ತಮ್ಮ ಅನಾರೋಗ್ಯವನ್ನು, ಬೊಜ್ಜನ್ನು, ಮೈಕೈ ನೋವುಗಳನ್ನು ಸ್ವೀಕರಿಸುವುದು ತಪ್ಪು ಮಾತ್ರವಲ್ಲ ಅಕ್ಷಮ್ಯ ಅಪರಾಧ, ತಮಗೆ ತಾವೇ ಮಾಡಿಕೊಳ್ಳುವ ಆತ್ಮ ದ್ರೋಹ. ಕೇಳಲು ತುಸು ದೊಡ್ಡ ಪದಗಳೆನಿಸಿದರೂ ಕೂಡ ಇದು ಹೆಣ್ಣು ಮಕ್ಕಳ ಬದುಕಿನ ಹಾರ್ಶ್ ರಿಯಾಲಿಟಿ.

ನೆವಗಳನ್ನು ಹೇಳಲೇಬೇಡಿ... ನಿಮ್ಮ ವೈಯುಕ್ತಿಕ ಆರೋಗ್ಯಕ್ಕಿಂತ ಹೆಚ್ಚಿನದು ಯಾವುದು ಇಲ್ಲ. ಅಟ್ಟ ಮೇಲೆ ಒಲೆ ಉರಿಯಿತು ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ವಯಸ್ಸು 30 ದಾಟುತ್ತಿದ್ದಂತೆ ಸಣ್ಣಪುಟ್ಟ ನೋವುಗಳು, ತೊಂದರೆಗಳು, ಬೊಜ್ಜು ಹೆಣ್ಣು ಮಕ್ಕಳನ್ನು ಆವರಿಸಿಕೊಳ್ಳುತ್ತದೆ. ಮನೆ ಮಕ್ಕಳ ಜವಾಬ್ದಾರಿಯಲ್ಲಿ ತನ್ನ ಆರೋಗ್ಯವನ್ನು ಕಡೆಗಣಿಸುವ ಹೆಣ್ಣುಮಕ್ಕಳು ಅನಂತರ ಮಧ್ಯ ವಯಸ್ಸಿನಲ್ಲಿಯೇ ಮುಪ್ಪಿನ ಅವಸ್ಥೆಗೆ ಬಂದು ತಮ್ಮ ದುರಾದೃಷ್ಟವನ್ನು ಹಳಿಯುತ್ತಾರೆ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ನನ್ನ ಮನೆ, ಗಂಡ, ಮಕ್ಕಳು, ಅತ್ತೆ–ಮಾವ, ಸಂಬಂಧಿಕರು ದೈನಂದಿನ ಆಗುಹೋಗುಗಳು... ಇವೆಲ್ಲ ಕೇವಲ ನಿಮ್ಮೊಬ್ಬರ ಜವಾಬ್ದಾರಿಯಲ್ಲ. ಬೇರೆಯವರ ಎಲ್ಲ ಕೆಲಸಗಳನ್ನು ಮಾಡುತ್ತಾ ನೀವು ಅವರಿಗೆ ಉಪಕಾರ ಮಾಡುತ್ತಿದ್ದೀರಿ ಎಂದು ನೀವು ಭಾವಿಸುವುದಾದರೆ ಅದು ಶುದ್ಧ ಸುಳ್ಳು,ಅವರಿಗೆ ಮಾಡಿಕೊಳ್ಳಲಾಗದೆ ಹೋದ ಪಕ್ಷದಲ್ಲಿ ಮಾತ್ರ ಸಹಾಯವಾಗುತ್ತದೆಯೇ ಹೊರತು ನಿಜದಲ್ಲಿ ನೀವು ಅವರನ್ನು ಪರಾವಲಂಬಿಗಳಾಗಿಸುತ್ತಿದ್ದೀರಿ ಎಂದರ್ಥ. ನಿಜವಾಗಿಯೂ ನಿಮ್ಮವರನ್ನು ನೀವು ಪ್ರೀತಿಸುತ್ತೀರಾದರೆ ಅವರವರ ಸಣ್ಣ ಪುಟ್ಟ ಕೆಲಸಗಳನ್ನು ಅವರೇ ಮಾಡಿಕೊಳ್ಳಲು ಮನವೊಲಿಸಿ.ಇದರಿಂದ ಅವರು ನಿಮ್ಮ ಮೇಲೆ ಅವಲಂಬಿಸುವುದು ತಪ್ಪು ವುದಲ್ಲದೆ ಪ್ರತಿ ಸಾರಿ ಯಾವುದೇ ವಸ್ತುವಿಗಾಗಿ ನಿಮ್ಮನ್ನು ಕರೆಯುವುದು ಕೂಡ ತಪ್ಪುತ್ತದೆ, ಜೊತೆಗೆ ತಮ್ಮ ಕೆಲಸಗಳನ್ನು ಮಾಡುವ ಮೂಲಕ ಹಿರಿಯರಾದರೆ ತುಸು ಆತ್ಮ ಸಂತೃಪ್ತಿಯನ್ನು ಹೊಂದುತ್ತಾರೆ,ಮಕ್ಕಳಾದರೆ ಸ್ವಾವಲಂಬನೆಯ ಪಾಠವನ್ನು ಕಲಿಯುತ್ತಾರೆ.

ಮನೆಯಲ್ಲಿ ಹಿರಿಯರಾದ ಅತ್ತೆ ಮಾವ ಇದ್ದು ಅವರು ತುಸು ಗಟ್ಟಿಮುಟ್ಟಾಗಿದ್ದು, ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಸಾಧ್ಯವಿದ್ದರೆ ಅವರಿಗೆ ಕುಳಿತಲ್ಲಿಯೇ ಎಲ್ಲವನ್ನು ಸರಬರಾಜು ಮಾಡಬೇಡಿ. ನಡೆದಾಡಿ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಂಡಾಗ ಅವರ ಕಾಲುಗಳ ಗಂಟುಗಳು ಸಡಿಲವಾಗುತ್ತದೆ. ಹೊಟ್ಟೆಯ ನೀರು ಅಲುಗಾಡದಂತೆ ಕುಳಿತಲ್ಲೇ ಕುಳಿತರೆ ಅವರ ದೇಹಾರೋಗ್ಯದ ಗತಿ ಏನು?? ಇನ್ನು ಗಂಡ ಮತ್ತು ಮಕ್ಕಳು ನಿಮ್ಮ ಮೇಲೆ ಪ್ರತಿಯೊಂದು ವಿಷಯಕ್ಕೂ ಅವಲಂಬಿಸುವುದು ಖುಷಿ ಕೊಡುತ್ತದಾದರೂ, ದೀರ್ಘಾವಧಿಯ ಸಮಯದಲ್ಲಿ ತುಸು ಕಿರಿಕಿರಿ ಮತ್ತು ಬೇಸರವನ್ನು ಉಂಟುಮಾಡುತ್ತದೆ.

ಬಹುತೇಕ ಹೆಣ್ಣು ಮಕ್ಕಳು ತಮ್ಮ ಮಕ್ಕಳನ್ನು ಕೂಗಿ ಎಬ್ಬಿಸಿ ಅವರಿಗೆ ಬ್ರಶ್ ಮಾಡುವಲ್ಲಿಂದ ಹಿಡಿದು ಶಾಲೆಗೆ ಹೋಗುವವರೆಗಿನ ಎಲ್ಲಾ ಕೆಲಸಗಳನ್ನು ತಾವೇ ಖುದ್ದಾಗಿ ಮಾಡುತ್ತಾರೆ. ಬೆಳಗಿನ ತಿಂಡಿ ಚಹಾ ಕಾಫಿ ತಯಾರಿಯಂತಹ ಮನೆ ಕೆಲಸಗಳ ಜೊತೆಗೆ ಮಕ್ಕಳ ಎಲ್ಲ ಕೆಲಸಗಳ ಜವಾಬ್ದಾರಿ ತಲೆಯ ಮೇಲೆ ಹೊತ್ತು ಕೊಂಡಾಗ ನಿಮಗರಿವಿಲ್ಲದೆ ನಿಮ್ಮಲ್ಲಿ ಒಂದು ಒತ್ತಡ ಸೃಷ್ಟಿಯಾಗುತ್ತದೆ... ಈ ಒತ್ತಡ ದಿನಗಳೆದಂತೆ ಮಾನಸಿಕ ಉದ್ವೇಗ, ರಕ್ತದೊತ್ತಡಕ್ಕೆ ಕಾರಣವಾಗುತ್ತದೆ. ಆದ್ದರಿಂದ ನಿಮ್ಮ ಮಕ್ಕಳಿಗೆ ಸ್ವಾವಲಂಬನೆಯ ತರಬೇತಿಯನ್ನು ಚಿಕ್ಕಂದಿನಿಂದಲೇ ನೀಡಿ. ಐದು ವರ್ಷಕ್ಕಿಂತ ದೊಡ್ಡ ಮಕ್ಕಳು ತಮ್ಮ ಪಾಡಿಗೆ ತಾವೇ ನಿಗದಿತ ಸಮಯಕ್ಕೆ ಎದ್ದು ಬ್ರಷ್ ಮಾಡಿ, ಮುಖ ತೊಳೆದು, ದೈನಂದಿನ ಕರ್ಮಗಳನ್ನು ಮುಗಿಸಿಕೊಂಡರೆ ಬಹಳ ಅನುಕೂಲ. ಇದರ ಜೊತೆಗೆ ಮಕ್ಕಳು ತಮ್ಮ ನೀರಿನ ಬಾಟಲಿ, ಪುಸ್ತಕಗಳು, ನೋಟ ಬುಕ್ಕುಗಳು ಪೆನ್ನು ಪೆನ್ಸಿಲ್ ಎಲ್ಲವನ್ನು ತಾವೇ ಹೊಂದಿಸಿಕೊಂಡು ಶಾಲೆಗೆ ತಯಾರಾಗಲಿ. ಅಂತಿಮವಾಗಿ ನೀವು ಒಮ್ಮೆ ಕಣ್ಣು ಹಾಯಿಸಿದರೆ ಸಾಕು. ತಮ್ಮ ಕೈಯಾರೆ ತಾವೇ ತಿಂಡಿ ತಿಂದು ನೀರು ಕುಡಿದು ಸಾಕ್ಸ ಮತ್ತು ಶೂ ಹಾಕಿಕೊಂಡು ಮಕ್ಕಳು ಶಾಲೆಗೆ ಹೊರಟರೆ ನಿಮಗೆ ನಿರಾಳವಾದೀತು.

ಬಹಳಷ್ಟು ಸಮಯ ನಮ್ಮನ್ನು ನಾವು ಬಿಜಿ ಎಂದು ಹೇಳಿಕೊಳ್ಳಲು ಕಾರಣ ಚಿಕ್ಕಂದಿನಿಂದಲೇ ನಾವು ಸತತವಾಗಿ ಕಾರ್ಯನಿರ್ವಹಿಸಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ನಮ್ಮ ಮನಸ್ಸಿಗೆ ನಾವು ಕೊಟ್ಟುಕೊಂಡ ತರಬೇತಿಯಾಗಿದೆ. ನಾವು ಹೆಚ್ಚು ಕೆಲಸ ಮಾಡುತ್ತೇವೆ ಎಂಬ ಪೊಳ್ಳು ಪ್ರತಿಷ್ಠೆಯನ್ನು ತೋರಿಸಲು ಬಹಳಷ್ಟು ಬಾರಿ ಬಿಜಿ ಎಂಬ ಪದವನ್ನು ನಾವು ಬಳಸುತ್ತೇವೆ.

ಚಿಕ್ಕಂದಿನಿಂದಲೂ ನಾವು ಚೆನ್ನಾಗಿ ಓದಿ ಒಳ್ಳೆಯ ಅಂಕಗಳನ್ನು ಗಳಿಸಲು, ಒಳ್ಳೆಯ ಉದ್ಯೋಗ ಹಿಡಿಯಲು ಮದುವೆಯಾಗಿ ಮಕ್ಕಳನ್ನು ಪಡೆದು ಜೀವನದಲ್ಲಿ ಸೆಟಲ್ ಆಗಲು ಹೀಗೆ ಪ್ರತಿಯೊಂದು ವಿಷಯದಲ್ಲಿಯೂ ಒತ್ತಾಯಿಸಲ್ಪಡುತ್ತೇವೆ. ಮುಂದೆ ಮದುವೆ ಮಕ್ಕಳು ಆಚೆ ಮಾವ ಮನೆಯ ಜವಾಬ್ದಾರಿ ಕೂಡ ನಮ್ಮಲ್ಲಿ ಒತ್ತಡವನ್ನು ಸೃಷ್ಟಿಸುತ್ತವೆ. ಒಳ್ಳೆಯ ಅಂಕ ಗಳಿಕೆ, ಉನ್ನತ ಉದ್ಯೋಗಾವಕಾಶ ನಮ್ಮ ಸಾಮಾಜಿಕ ಪ್ರತಿಷ್ಠೆಯನ್ನು ಹೆಚ್ಚಿಸುತ್ತದೆ ಎಂಬ ಕಾರಣಕ್ಕಾಗಿ ನಮ್ಮನ್ನು ಒತ್ತಾಯಿಸಲಾಗುತ್ತದೆ.ಇದು ಸ್ವಲ್ಪ ಮಟ್ಟಿಗೆ ನಿಜವಾದರೂ ವಯಸ್ಸು ನಲವತ್ತು ಸಮೀಪಿಸುತ್ತಿರುವಾಗ ನಮ್ಮ ಅರಿವಿಗೆ ಬರುವುದು ಜೀವನ ನಾವು ಅಂದುಕೊಂಡಂತೆ ಇರುವುದಿಲ್ಲ ಎಂದು.

ಒಳ್ಳೆಯ ಉದ್ಯೋಗ,ಕೌಟುಂಬಿಕ ಬದುಕು ಆರ್ಥಿಕ ಸ್ಥಿತಿಗತಿಗಳನ್ನು ಹೊಂದಿದಾಗ್ಯೂ ಕೂಡ ಮನದಲ್ಲಿ ಅತೃಪ್ತಿ,ಅಸಂತೋಷ ಕಾಡುತ್ತವೆ. ಸಂಬಂಧಗಳನ್ನು ಪೋಷಿಸುವಲ್ಲಿ ನಾವು ವಿಫಲವಾಗಿ ಅಸಮಾಧಾನ ಹೊಗೆಯಾಡುತ್ತದೆ. ಇವೆಲ್ಲದರ ಪರಿಣಾಮವಾಗಿ 40 ಸಮೀಪಿಸುತ್ತಿದ್ದಂತೆ ದೇಹದ ತೊಂದರೆಗಳು ತಮ್ಮ ಇರುವನ್ನು ಸಾರುತ್ತವೆ.

ಸ್ನೇಹಿತರೆ ಈಗಲಾದರೂ ಎಚ್ಚೆತ್ತುಕೊಳ್ಳಿ... ನಿಮ್ಮ ಮನಸ್ಥಿತಿಯನ್ನು ಬದಲಾಯಿಸಿಕೊಂಡು ನಿಮ್ಮನ್ನು ನೀವು ಕಾಳಜಿ ಮಾಡಿಕೊಳ್ಳುವ ಮೂಲಕ ಸಮಾಜಕ್ಕೆ ಮಾದರಿಯಾಗಿ. ಜೀವನಶೈಲಿಯನ್ನು ಬದಲಾಯಿಸಿಕೊಳ್ಳಿ, ನಿಮ್ಮದೇ ಜೀವನದಲ್ಲಿನ ಸ್ವಲ್ಪ ಸಮಯವನ್ನು ನಿಮಗಾಗಿ ವ್ಯಯಿಸಿ ನಿಮ್ಮ ವೈಯುಕ್ತಿಕ ಜೀವನದ ಸವಿಯ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಿ, ಸಂಬಂಧಗಳಲ್ಲಿ ಮಾರ್ದವತೆ ತನ್ನಿ ಮತ್ತು ಮುಖ್ಯವಾಗಿ ವಿಶ್ರಾಂತಿಯನ್ನು ಪಡೆಯಿರಿ.

ಸಂತೃಪ್ತಿಕರ ಜೀವನವನ್ನು ರೂಪಿಸಿಕೊಳ್ಳಲು ನಿಮಗೆ ಬೇಕಾಗುವ ಸಮಯವನ್ನು ಹೊಂದಿಸಿಕೊಳ್ಳುವ ವ್ಯಕ್ತಿ ನೀವಾಗಿ. ಯಶಸ್ವಿ ಮತ್ತು ಸಂತೃಪ್ತಿಯುತ ಜೀವನವನ್ನು ನಡೆಸುವತ್ತ ನಿಮ್ಮನ್ನು ನಾವು ತೊಡಗಿಸಿಕೊಳ್ಳುವ ಮೂಲಕ ನಿಮ್ಮ ಮುಂದಿನ ಪೀಳಿಗೆಗೆ ಅರ್ಥಪೂರ್ಣ ಜೀವನ ನಡೆಸುವ ಪಾಠ ಕಲಿಸಿ. ನಿಮ್ಮ ತಪ್ಪುಗಳನ್ನು ನಿಮ್ಮ ಮಕ್ಕಳು ಪುನರಾವರ್ತಿಸದಂತೆ ಬದುಕಲು ಪ್ರೇರೇಪಿಸೋಣ.

### ಲೋಕ ಅದಾಲತ್ : ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಿದ್ಧತಾ ಸಭೆ

## ಪ್ರಕರಣಗಳ ಇತ್ಯಾರ್ಥಕ್ಕೆ ಪೊಲೀಸರು ಸಹಕರಿಸಿ

### 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ್ ಎ.ನಂದಗಡಿ ಹೇಳಿಕೆ

■ ಹಂಪಿ ಟೈಮ್ಸ್ ಹೊಸಪೇಟೆ

ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆಯ ಪಾತ್ರ ಅತ್ಯಂತ ಪ್ರಮುಖವಾಗಿದೆ. ಆ ನಂತರದಲ್ಲಿ ನ್ಯಾಯಾಂಗ ಇಲಾಖೆಯ ಪಾತ್ರ ಇರುತ್ತದೆ. ಹಾಗಾಗಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯು ಜವಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ್ ಎ.ನಂದಗಡಿ ಹೇಳಿದರು.

ಹೊಸಪೇಟೆ ತಾಲೂಕು ನ್ಯಾಯಾಲಯದ ಕಚೇರಿ ಸಭಾಂಗಣದಲ್ಲಿ ಜುಲೈ 13ರಂದು ನಿಗದಿಯಾದ ರಾಷ್ಟ್ರೀಯ ಲೋಕ ಅದಾಲತ್ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆಯ ಪೊಲೀಸ್ ಇಲಾಖೆಯ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಬುಧವಾರ ಮಾತನಾಡಿದರು. ಲೋಕ ಅದಾಲತ್‌ನಲ್ಲಿ ಪೊಲೀಸ್ ಇಲಾಖೆಯ ಪ್ರಕರಣಗಳು ಸಹ ಇತ್ಯರ್ಥವಾಗಬೇಕು. ಪೊಲೀಸ್ ಇಲಾಖೆಗೆ ಸಂಬಂಧಿಸಿದ ಪ್ರಕರಣಗಳು ಇಳಿಮುಖ ವಾಗಲು ಪೊಲೀಸ್ ಇಲಾಖೆಯ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಹಕಾರ ಮತ್ತು ಸಮನ್ವಯ ಅಗತ್ಯವಾಗಿದೆ ಎಂದು ಅವರು ಸಲಹೆ ಮಾಡಿದರು.



**ಕಾರ್ಯವೈಖರಿಗೆ ಮೆಚ್ಚುಗೆ:** ವಿಜಯನಗರ ಜಿಲ್ಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಜಿಲ್ಲೆಯ ಪೊಲೀಸ್ ಇಲಾಖೆಯು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ಹಾಗೂ ಅಭಿನಂದನಾರ್ಹ ಸಂಗತಿ ಎಂದು ಶ್ರೀಹರಿ ಬಾಬು ಅವರ ಕಾರ್ಯವೈಖರಿಯ ಬಗ್ಗೆ ನ್ಯಾಯಾಧೀಶರು ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್. ಮಾತನಾಡಿ, ಲೋಕ ಅದಾಲತ್‌ನಲ್ಲಿ ಗೌರವಾನ್ವಿತ ನ್ಯಾಯಾಧೀಶರ ಸೂಚನೆಗಳನ್ನು ಪಾಲಿಸಿ, ಬಾಕಿ ಉಳಿದ ಪೊಲೀಸ್‌ಪ್ರಕರಣಗಳನ್ನುಇತ್ಯರ್ಥಪಡಿಸುವಲ್ಲಿ ಶ್ರಮವಹಿಸಲಾಗುವುದು. ಕಾನೂನು ಸುವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಕಾಪಾಡುವಲ್ಲಿ ಇಡೀ ರಾಜ್ಯದಲ್ಲಿಯೇ ವಿಜಯನಗರ ಜಿಲ್ಲೆಯು 4ನೇ ಸ್ಥಾನದಲ್ಲಿದೆ ಎಂದು ತಿಳಿಸಿದರು.

ಪ್ರಧಾನ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವಾ ಸಮಿತಿಯ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ ನಾಗಲಾಪುರ ಮಾತನಾಡಿದರು.

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಹೇಮಲತಾ ಬಿ.ಹುಲ್ಲೂರು, ಗೌರವಾನ್ವಿತ ಅಪರ ಹಿರಿಯ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ರಮೇಶ್ ಬಾಬು ಬಿ.ಎನ್., ಗೌರವಾನ್ವಿತ ಪ್ರಧಾನ ಸಿವಿಲ್ ಹಾಗೂ ಗೌರವಾನ್ವಿತ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್ ನ್ಯಾಯಾಧೀಶರಾದ ಅಶೋಕ ಆರ್.ಎಚ್, ಗೌರವಾನ್ವಿತ 2ನೇ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಸಂಜೀವಕುಮಾರ.ಜಿ ಮತ್ತು 3ನೇ ಅಪರ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಧೀ ಶರಾದ ಚೈತ್ರ.ಜೆ, ಸಹಾಯಕ ಅಭಿಯೋಜಕ ರೇವಣಸಿದ್ದಪ್ಪ ಹಾಗೂ ಜಿಲ್ಲೆಯ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಸಲಿಮ್ ಪಾಷ ಮತ್ತು ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿಗಳು ಮತ್ತು ತಾಲೂಕು ಕಾನೂನು ಸೇವಾ ಸಮಿತಿಯ ಸಹಾಯಕ ಎಸ್.ಬಿ.ಕಮತಗಿ ಉಪಸ್ಥಿತರಿದ್ದರು

## ಜು.06 ರಂದು ಡಾ.ಬಾಬು ಜಗಜೀವನ ರಾಂ ಅವರ ಪರಿನಿರ್ವಾಣ ದಿನೋತ್ಸವ

■ ಹಂಪಿ ಟೈಮ್ಸ್ ಬಳ್ಳಾರಿ

ಭಾರತದ ಮಾಜಿ ಉಪ ಪ್ರಧಾನಮಂತ್ರಿ, ಹಸಿರುಕ್ರಾಂತಿ ಹರಿಕಾರ, ಡಾ.ಬಾಬು ಜಗಜೀವನ ರಾಂ ಅವರ 38ನೇ ಪರಿನಿರ್ವಾಣ ದಿನೋತ್ಸವವನ್ನು ಜು.06 ರಂದು ಬೆಳಿಗ್ಗೆ 10 ಗಂಟೆಗೆ ನಗರದ ಜಿಲ್ಲಾ ಮೈದಾನ ಎದುರುಗಡೆಯ ನಲ್ಲಚೇರುವು ಪ್ರದೇಶದ ಡಾ.ಬಾಬು ಜಗಜೀವನರಾಂ ಭವನದಲ್ಲಿ ಆಚರಿಸಲಾಗುವುದು.

ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಡಾ.ಬಾಬು ಜಗಜೀವನರಾಂ ಭವನ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡುವರು.

ವಿವಿಧ ದಲಿತ ಸಂಘಟನೆಗಳ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಮತ್ತು ದಲಿತ ಸಂಘದ ಮುಖಂಡರು ಹಾಗೂ ಸಾರ್ವಜನಿಕರು ಭಾಗವಹಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.



ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ಕ್ರೋಧಿ

**05–07–2024 – ಶುಕ್ರವಾರ**

| | |
|---|---|
| ತಿಥಿ | : ಅಮವಾಸ್ಯೆ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅರ್ದ್ರ |
| ಯೋಗ | : ಧ್ರುವ |
| ಕರಣ | : ಚತುಷ್ಪಾದ |
| ಸೂರ್ಯೋದಯ | : 05:47:33 |
| ಸೂರ್ಯಾಸ್ತ | : 19:15:37 |
| ರಾಹು | : 10:51–12:32 |
| ಯಮಘಂಡ | : 15:54–17:35 |
| ಗುಳಿಕ | : 07:29–09:10 |

## ತುಂಗಭದ್ರಾ ನೀರಿನ ಮಟ್ಟ



**ಗುರುವಾರ : 04–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1588.84 ಅಡಿ |
| ಒಳ ಹರಿವು | 15492 ಕ್ಯುಸೆಕ್ |
| ಹೊರ ಹರಿವು | 273 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.089 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1576.65 ಅಡಿ |
| ಒಳ ಹರಿವು | 798 ಕ್ಯುಸೆಕ್ |
| ಹೊರ ಹರಿವು | 136 ಕ್ಯುಸೆಕ್ |
| ಸಾಮರ್ಥ್ಯ | 3.056 ಟಿಎಂಸಿ |

## ವಿದ್ಯಾರ್ಥಿಗಳು ಪರಿಸರ ಪ್ರೇಮಿಗಳಾಗಿ

ಮೊದಲ ಪುಟದಿಂದ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿ ಬಾಬು ಬಿ.ಎಲ್., ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಾದ ಅರ್ಸಲನ್, ಸಹಾಯಕ ಆಯುಕ್ತರಾದ ಮಹಮ್ಮದ್ ಅಲಿ ಅಕ್ರಮ ಷಾ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಮನೋಹರ, ನಗರಸಭೆ ಆಯುಕ್ತರಾದ ಈರಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಚನ್ನಬಸಪ್ಪ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರಾಜೇಶ್ ನಾಯ್ಕ್, ಹೊಸಪೇಟೆ ವಲಯ ಅರಣ್ಯಾಧಿಕಾರಿ ಭರತ್‌ರಾಜ್, ಸಾಮಾಜಿಕ ಅರಣ್ಯಾಧಿಕಾರಿ ನಾಗ ರಾಜ್.ಕೆ, ಅರಣ್ಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಗೂ ಸರಕಾರಿ ಪದವಿ ಪೂರ್ವ ಕಾಲೇಜು, ಅಂಬೇಡ್ಕರ್ ಶಾಲೆ ಮತ್ತು ಆದರ್ಶ ವಿದ್ಯಾಲಯದ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರು ಇದ್ದರು.

## ಗ್ರಾಮ ಸಹಾಯಕರ ಹುದ್ದೆಗೆ ಅರ್ಜಿ ಆಹ್ವಾನ

ಮೊದಲ ಪುಟದಿಂದ

ಕಚೇರಿಗೆ ಭರಿಸಬೇಕಾಗಿದೆ. ವಿದ್ಯಾರ್ಹತೆ: ಅಭ್ಯರ್ಥಿಗಳು ಕನಿಷ್ಠ 7ನೇ ತರಗತಿ ಉತ್ತೀರ್ಣರಾಗಿರುವ ವಿದ್ಯಾರ್ಹತೆಯನ್ನು ಈ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ ಮುಂಚಿತವಾಗಿ ಹೊಂದಿರತಕ್ಕದ್ದು, ಈ ಕುರಿತು ಮಾನ್ಯ ಸರಕಾರದ ಅನುದಾನಿತ ಶಾಲೆಗಳಿಂದ ಅಥವಾ ಖಾಸಗಿ ಶಾಲೆಗಳಿಂದ ಪಡೆದ ದಾಖಲೆ ಒದಗಿಸತಕ್ಕದ್ದು, ಮಾಸಿಕ ವೇತನ 15,000 ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ತಹಸೀಲ್ದಾರರ ಕಾರ್ಯಾಲಯದ ದೂ.ಸಂಖ್ಯೆ:08394–224208ಗೆ ಸಂಪರ್ಕಿಸಬಹುದಾಗಿದೆ ಎಂದು ಹೊಸಪೇಟೆ ಪ್ರಾಧಿಕಾರ ಹಾಗೂ ತಹಶೀಲ್ದಾರರಾದ ವಿಶ್ವಜೀತ ಮೇಹತಾ ತಿಳಿಸಿದ್ದಾರೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
Follow for vijayanagara dist. updates

# ಸ್ಥಳದಲ್ಲೇ ಸಿಟಿಜನ್ ಪೋರ್ಟಲ್‌ನಲ್ಲಿ ದಾಖಲಿಸಿ ಶೌಚಾಲಯ ಸೌಲಭ್ಯಕ್ಕೆ ಕಾರ್ಯಾದೇಶ ನೀಡಿ

## ಜಿಪಂ ಸಿಇಒ ಸದಾಶಿವ ಪ್ರಭು ಪಿಡಿಓಗಳಿಗೆ ಖಡಕ್ ಸೂಚನೆ



**ಹಂಪಿ ಟೈಮ್ಸ್ ಹೊಸಪೇಟೆ**

ಬಯಲು ಬಹಿರ್ದೆಸೆ ಮುಕ್ತ ಸಮಾಜ ನಿರ್ಮಾಣಕ್ಕೆ ಶ್ರಮಿಸಬೇಕು. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸಮೀಕ್ಷೆ ಏರ್ಪಡಿಸಿ ಶೌಚಾಲಯ ಇಲ್ಲದ ಮನೆಗಳನ್ನು ಗುರುತಿಸಿ ಸ್ಥಳದಲ್ಲಿಯೇ ಸಿಟಿಜನ್ ಪೋರ್ಟಲ್‌ನಲ್ಲಿ ಅರ್ಜಿ ದಾಖಲಿಸಿ ಅವರಿಗೆ ನಿಯಮಾನಸಾರ ಶೌಚಾಲಯ ಸೌಲಭ್ಯ ಕಲ್ಪಿಸಲು ತ್ವರಿತ ಕ್ರಮ ಕೈಗೊಂಡು ಕಾರ್ಯಾದೇಶ, ಪಾವತಿ ಆದೇಶ ನೀಡಬೇಕು ಎಂದು ಸಭೆಯಲ್ಲಿ ಜಿಪಂ ಸಿಇಓ ಬಿ.ಸದಾಶಿವ ಪ್ರಭು ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ವಿಜಯನಗರ ಜಿಲ್ಲೆಯ ಗ್ರಾಮ ಪಂಚಾಯಿತಿ ಹಂತದ ಪ್ರಗತಿ ಪರಿಶೀಲಾ ಸಭೆಯ ಅಧ್ಯಕ್ಷತೆವಹಿಸಿ ಜಿಲ್ಲಾ ಪಂಚಾಯಿತಿಗೆ ಸಂಬಂಧಿಸಿದ ಜಲಜೀವನ್ ಮಿಷನ್, ಸ್ವಚ್ಛ ಭಾರತ್ ಮಿಷನ್, ವಸತಿ ಯೋಜನೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಪಂಚಾಯತ್ ರಾಜ್ ವಿಷಯಕ್ಕೆ ಸಂಬಂಧಿಸಿದಂತೆ, ತೆರಿಗೆ ವಸೂಲಾತಿ, ಆಸ್ತಿಗಳ ಸಮೀಕ್ಷೆ, ಸಕಾಲ, ಗ್ರಾಮ ಆರೋಗ್ಯ ಅಭಿಯಾನ, ಬಯೋಮೆಟ್ರಿಕ್ ಹಾಜರಾತಿ, ಗ್ರಂಥಾಲಯ ಉಪಕರವನ್ನು ಜಿಲ್ಲಾ ಪಂಚಾಯತ್ ಖಾತೆಗೆ ಜಮಾ ಮಾಡುವ ವಿಷಯಗಳ ಕುರಿತು ಪ್ರಗತಿ ವರದಿ ಪರಿಶೀಲಿಸಿ ಮಾತನಾಡಿದರು. ವಾಡಿಕೆಯಂತೆ ಜಿಲ್ಲೆಯಲ್ಲಿ ಮಳೆಯಾಗುತ್ತಿದ್ದು, ಸದ್ಯ ಬರದ ತೀವ್ರತೆ ಕಡಿಮೆಯಾಗಿದ್ದರು ಸಹ ಕುಡಿಯುವ ನೀರು ಪೂರೈಕೆ, ನೈರ್ಮಲ್ಯದಂತಹ ವಿಷಯಗಳ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಇದೇ ವೇಳೆ ಜಿಲ್ಲೆಯಾದ್ಯಂತ ಕಾರ್ಯದೇಶ ಮತ್ತು ಪಾವತಿ ಆದೇಶ ನೀಡುವಲ್ಲಿ ತುಂಬಾ ವಿಳಂಬವಾಗು ತ್ತಿರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಪ್ರತಿ ತಾಲೂಕುವಾರು ಪ್ರತಿವಾರ ವಿಡಿಯೋ ಸಂವಾದ ನಡೆಸಲಾಗುವುದು. ಒಂದು ವೇಳೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಪ್ರಗತಿ ಸಾಧಿಸಲು ವಿಫಲರಾದಲ್ಲಿ ಅಂತಹವರ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದೆಂದು ಎಚ್ಚರಿಕೆ ನೀಡಿದರು.

**ನಿರ್ಲಕ್ಷ್ಯ ತೋರಿದಲ್ಲಿ ಕ್ರಮ:** ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ಮಂಜೂರಾದ ಮನೆಗಳನ್ನು ಕಟ್ಟಲು ಕ್ರಮಕೈಗೊಳ್ಳುವಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ನಿರ್ಲಕ್ಷ್ಯದ ಬಗ್ಗೆ ಅಂಕಿ ಅಂಶಗಳ ಸಹಿತ ವಿವರಿಸಿದ ಸಿಇಓ ಅವರು, ಕೆಲವೇ ಕೆಲ ಅಧಿಕಾರಿಗಳ ನಿರ್ಲಕ್ಷ್ಯ ವಹಿಸುವುದರಿಂದ ಇಡೀ ಅಧಿಕಾರಿಗಳ ಸಮೂಹಕ್ಕೆ ಕೆಟ್ಟ ಹೆಸರು ಬರುತ್ತದೆ. ಇಂತಹ ಕಾರಣಗಳಿಂದ ರಾಜ್ಯಮಟ್ಟದಲ್ಲಿ ನಮ್ಮ ಜಿಲ್ಲೆಯ ಪ್ರಗತಿಗೆ ತುಂಬಾ ಹಿನ್ನಡೆ ಉಂಟಾಗುತ್ತದೆ. ಅಧಿಕಾರಿಗಳು ನಿಷ್ಕಾಳಜಿ ತೋರುವುದು ಕಂಡುಬಂದಲ್ಲಿ ಮುಲಾಜಿಲ್ಲದೇ ಕ್ರಮ ವಹಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

**ವರದಿ ನೀಡಲು ಸೂಚನೆ:**
ಮಂಜೂರಾದ ಮನೆಗಳ ನಿರ್ಮಾಣದ ಬಗ್ಗೆ ಒಂದೆರಡು ದಿನಗಳಲ್ಲಿ ಸಂಪೂರ್ಣ ವರದಿ ನೀಡಬೇಕು. ಫಲಾನುಭವಿಗಳ ಆಯ್ಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ವಸತಿ ಸೌಲಭ್ಯದ ಅವಶ್ಯಕತೆ ಇರುವ ಅರ್ಹರಿಗೆ ಮನೆಗಳು ಸಿಗುವಂತೆ ನೋಡಿಕೊಳ್ಳಬೇಕು. ಒತ್ತಡಕ್ಕೆ ಒಳಗಾಗಿ ಫಲಾನುಭವಿಗಳ ಆಯ್ಕೆಯಲ್ಲಿ ನಿಯಮ ಉಲ್ಲಂಘನೆಯಾಗಿರುವುದು ಕಂಡು ಬಂದಲ್ಲಿ ಶಿಸ್ತು ಕ್ರಮ ಜರುಗಿಸಲಾಗುವುದು. ಫಲಾನುಭವಿಗಳ ಆಯ್ಕೆಯಲ್ಲಿ ಎಚ್ಚರ ವಹಿಸಬೇಕು ಎಂದು ತಿಳಿಸಿದರು. ಈಗಾಗಲೇ ಲೇಔಟ್ ಪ್ಲಾನ್ ಅನುಮೋದನೆಯಾಗಿರುವ ಪಂಚಾಯಿತಿಗಳಲ್ಲಿ ಲೇಔಟ್ ಅಭಿವೃದ್ಧಿಪಡಿಸಲು ಅನುದಾನ ಬಿಡುಗಡೆ ಪ್ರಸ್ತಾವನೆಯನ್ನು ತ್ವರಿತವಾಗಿ ಸಲ್ಲಿಸಬೇಕು. ವಸತಿ ರಹಿತರಿಗೆ ಮನೆಗಳ ಸೌಲಭ್ಯ ತ್ವರಿತವಾಗಿ ದೊರೆಯಲು ಕ್ರಮ ವಹಿಸಬೇಕು ಎಂದು ಸಿಇಓ ಅವರು ಸೂಚಿಸಿದರು.

**ಸರ್ಕಾರದ ಸ್ವತ್ತನ್ನು ರಕ್ಷಿಸಿ:** ಗ್ರಾಮೀಣ ಪ್ರದೇಶದಲ್ಲಿನ ಕುಡಿಯುವ ನೀರಿನ ಸರಬರಾಜು ಪೈಪುಗಳ ಸೋರಿಕೆಯನ್ನು ಗಮನಿಸಿ ಕೂಡಲೇ ಸರಿಪಡಿಸಿ ಕುಡಿಯುವ ನೀರು ಕಲುಷಿತವಾಗದಂತೆ ಕ್ರಮವಹಿಸಬೇಕು. ಶುದ್ಧ ಕುಡಿಯುವ ನೀರಿನ ಮೋಟಾರ್ ಪಂಪ್ ಹಾಗು ಜಲಜೀವನ್ ಮಿಷನ್ ನೀರು ಸರಬರಾಜು ಪಂಪ್ ಸೇರಿದಂತೆ ಸರ್ಕಾರಿ ಸ್ವತ್ತುಗಳ ಕಳ್ಳತನ ಹಾಗೂ ಹಾನಿ ಮಾಡುವಂತಹ ಪ್ರಕರಣಗಳು ನಡೆದಲ್ಲಿ ಉದಾಸೀನ ಮಾಡದೆ ಕಡ್ಡಾಯವಾಗಿ ಪೊಲೀಸ್ ಇಲಾಖೆಗೆ ದೂರು ನೀಡಿ ಸ್ವತ್ತುಗಳ ರಕ್ಷಣೆಗೆ ನಿಲ್ಲಬೇಕು ಎಂದು ಸೂಚನೆ ನೀಡಿದರು.

**ಕಾರ್ಯವೈಖರಿಗೆ ಮೆಚ್ಚುಗೆ:** ಕಳೆದ ಫೆಬ್ರವರಿ, ಮಾರ್ಚ, ಏಪ್ರಿಲ್ ಮೇ ಮಾಹೆಗಳಲ್ಲಿ ಬಿಸಿಲು ಏರುಗತಿಯಲ್ಲಿತ್ತು. ಆ ವೇಳೆ ಕುಡಿಯುವ ನೀರು ಪೂರೈಕೆ ಸೇರಿದಂತೆ ಬೇಸಿಗೆಯ ಸಂದರ್ಭದ ಪರಿಸ್ಥಿತಿಯನ್ನು ತಾಲೂಕು ಹಾಗೂ ಗ್ರಾಮಮಟ್ಟದ ಅಧಿಕಾರಿಗಳು ಮತ್ತು ಸಿಬ್ಬಂದಿಯು ಸಹ ಅಚ್ಚುಕಟ್ಟಾಗಿ ನಿರ್ವಹಿಸಿದರು. ಲೋಕಸಭಾ ಚುನಾವಣೆ ಹಿನ್ನೆಲೆಯ ಕಾರ್ಯಗಳನ್ನು ಸಹ ಉತ್ತಮವಾಗಿ ಮಾಡಿದರು ಎಂದು ಜಿಪಂ ಸಿಇಓ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಫೀಲ್ಡ್ ಟೆಸ್ಟ್ ಕಿಟ್ ತರಬೇತಿ ನೀಡಲಾಯಿತು. ಕುಡಿಯಲು ಯೋಗ್ಯ ಮತ್ತು ಕಲುಷಿತ ನೀರು ಪರೀಕ್ಷೆ ನಡೆಸುವುದು ಹೇಗೆ ಎಂದು ಪ್ರಾತ್ಯಕ್ಷಿಕೆಯ ಮೂಲಕ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿ ನೀಡಲಾಯಿತು.

ಮುಂಗಾರು ಆರಂಭವಾಗುತ್ತಿರುವ ಸಂದರ್ಭದಲ್ಲಿ ಕಾಲರಾ ಹರಡುವಿಕೆ ತಡೆಗಟ್ಟುವುದು, ಡೆಂಗೆ, ಚಿಕೂನ್ ಗುನ್ಯಾದಂತಹ ರೋಗವಾಹಕ ನಿಯಂತ್ರಣ ಕುರಿತಂತೆ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿ ಸೇರಿದಂತೆ ವಿವಿಧ ಇಲಾಖೆಗಳ ಪಾತ್ರಗಳ ಬಗ್ಗೆ ಜಿಲ್ಲಾ ಸರ್ವೇಕ್ಷಣ ಅಧಿಕಾರಿ ಬಿ.ಷಣ್ಮುಖ ನಾಯ್ಕ ಅವರು ಮಾಹಿತಿ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಭೀಮಪ್ಪ ಲಾಳಿ, ಮುಖ್ಯ ಯೋಜನಾಧಿಕಾರಿ ಅನ್ನದಾನ ಸ್ವಾಮಿ, ಯೋಜನಾ ನಿರ್ದೇಶಕ ಅಶೋಕ್ ತೋಟದ ಅವರು ವಿಭಾಗವಾರು ಅಂಕಿ ಅಂಶಗಳನ್ನು ಚರ್ಚಿಸಿದರು. ಸಭೆಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು, ನರೇಗಾ ಕೋಶದ ತಾಲೂಕು ತಾಂತ್ರಿಕ ಸಂಯೋಜಕರು, ಟಿ.ಎಂ.ಐ.ಎಸ್ ಮತ್ತು ಟಿ.ಐ.ಇ.ಸಿ ಹಾಗೂ ಜಿಲ್ಲಾ ಪಂಚಾಯಿತಿಯ ಸಿಬ್ಬಂದಿ ಹಾಜರಿದ್ದರು.

# ಕಲಾ ಸಾಧಕರಾಗಲು ಶಿಸ್ತು ಸಮಯಪಾಲನೆ ಅತ್ಯಗತ್ಯ



**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಕಲಾವಿದರು ಶಿಸ್ತು ಮತ್ತು ಸಮಯ ಪಾಲನೆ ರೂಢಿಸಿಕೊಂಡಲ್ಲಿ ಕಲಾಕ್ಷೇತ್ರದಲ್ಲಿ ಸಾಧಕರಾಗಲು ಸಾಧ್ಯ ಎಂದು ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಮಾತಾ ಮಂಜಮ್ಮ ಜೋಗತಿ ಹೇಳಿದರು.

ಇಲ್ಲಿನ ದುರ್ಗಾದಾಸ್ ರಂಗ ಮಂದಿರದಲ್ಲಿ ಮರಿಯಮ್ಮನಹಳ್ಳಿಯ ರಂಗ ಚೇತನ ಕಲಾ ಟ್ರಸ್ಟ್ ಮತ್ತು ಮಸಾರಿ ನೆಲ್ಕುದ್ರಿಯ ರಂಗಲೋಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಸಂಯುಕ್ತಾಶ್ರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾಲೇಜು ರಂಗ ಪ್ರಯಣ ನಾಟಕದ ಸಿದ್ಧತೆಯ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದರು. ರಂಗಭೂಮಿಯಲ್ಲಿ ಪ್ರಾಮಾಣಿಕವಾಗಿ ಕಲಾಸೇವೆಯಲ್ಲಿ ತೊಡಗಿಸಿಕೊಂಡರೆ ಉತ್ತಮ ಸ್ಥಾನಮಾನಗಳು ಹುಡುಕಿಕೊಂಡು ಬರುತ್ತವೆ. ಅನೇಕ ಮಾರ್ಗಗಳಿಂದ ಹಣ ಗಳಿಸಬಹುದು ಅದರಿಂದ ಹೆಸರಾಗಲು ಕಷ್ಟಸಾಧ್ಯ. ನಿಸ್ವಾರ್ಥದ ಸೇವೆಯಿಂದ ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ ಎಂದರು.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತೆ ಹಾಗೂ ಹಿರಿಯ ರಂಗಕಲಾವಿದೆ ಡಾ. ಕೆ. ನಾಗರತ್ನಮ್ಮ ಮಾತನಾಡಿ, ರಂಗ ಕಲೆ ಜೀವಂತಿಕೆಗೆ ಕಲಾವಿದರ ಕೊಡುಗೆ ಅಪಾರವಾಗಿದೆ. ನಾಟಕಗಳು ಸಮಾಜ ತಿದ್ದುವ ಕಾರ್ಯ ಮಾಡುತ್ತದೆ. ನಾಟಕ ಕಲೆ ಉಳಿವಿಗಾಗಿ ಎಲ್ಲರೂ ಶ್ರಮಿಸಬೇಕಾಗಿದೆ ಎಂದು ಹೇಳಿದರು.

ರಂಗ ನಿರ್ದೇಶಕ ಬಿ.ಎಂ.ಎಸ್. ಪ್ರಭು, ಪತ್ರಕರ್ತ ಹಾಗೂ ರಂಗಕಲಾವಿದ ಸಿ.ಕೆ.ನಾಗರಾಜ, ಮಸಾರಿ ನೆಲ್ಕುದ್ರಿಯ ರಂಗಲೋಕ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಕಾರ್ಯದರ್ಶಿ ಎಂ. ಮಹಾಂತೇಶ್ ಮಾತನಾಡಿದರು.

ಕಲಾವಿದರಾದ ಕೆ. ರಾಮಚಂದ್ರಪ್ಪ, ಎಚ್.ಎಂ. ವೀರೇಂದ್ರ ಪ್ರಸಾದ್, ಹರಿಕಥೆ ಮಂಜು, ಮಲ್ಲೇಶ್ ಮಾಲ್ವಿ, ಮಂಜು ಕೊಪ್ಪಳ, ಹಿರಣ್ಯ ಬಿಜಾಪುರ, ರುದ್ರೇಶ್ ಕಲ್ಲಳ್ಳಿ, ಬಸವ ರಾಯಚೂರು, ಪೂರ್ಣಿಮಾ ತುಮಕೂರ್, ಸಂಗೀತ ಚಿತ್ರದುರ್ಗ, ಶಿವರಾಜ್ ಲೆಕ್ಕದ್, ಎಂ. ಮಹಾಂತೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಮತ್ಸ್ಯ ವಾಹಿನಿ ವಾಹನಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಹೊಸಪೇಟೆ**

ಮೀನುಗಾರಿಕೆ ಇಲಾಖೆಯಿಂದ ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಹಾಗೂ ಪರಿಸರ ಸ್ನೇಹಿ ಕಿಯೋಸ್ಕ್ ಮತ್ಸ್ಯ ವಾಹಿನಿ ಯೋಜನೆಗಳಡಿ ಮತ್ಸ್ಯ ವಾಹಿನಿ ವಾಹನ ನೀಡಲು ಅರ್ಹ ಮೀನು ಮಾರಾಟಗಾರರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಜುಲೈ 15 ಕೊನೆಯ ದಿನವಾಗಿದ್ದು, ಸಾಮಾನ್ಯ ವರ್ಗದವರಿಗೆ 1 ಲಕ್ಷ ರೂ.ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಹಿಳಾ ವರ್ಗದವರಿಗೆ 50 ಸಾವಿರ ರೂ. ಪ್ರಾರಂಭಿಕ ಭದ್ರತಾ ಠೇವಣಿ ಪಾವತಿಸಬೇಕಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಹೊಸಪೇಟೆ (ಮೊ.ನಂ 9620177588) ಕೂಡ್ಲಿಗಿ (ಮೊ.ನಂ: 8217725319), ಹಡಗಲಿ (ಮೊ.ನಂ:9620177588), ಹರಪನಹಳಿ (ಮೊ.ನಂ: 8951531330) ತಾಲೂಕುಗಳ ಮೀನುಗಾರಿಕೆ ಸಹಾಯಕ ನಿರ್ದೇಶಕರು ಅಥಾವ ಬಳ್ಳಾರಿ, ವಿಜಯನಗರ ಮೀನುಗಾರಿಕೆ ಉಪ ನಿರ್ದೇಶಕರ (ಮೊ.ನಂ :9449593156) ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ಮೀನುಗಾರಿಕೆ ಉಪ ನಿರ್ದೇಶಕರು ತಿಳಿಸಿದ್ದಾರೆ.

# ಮುಡಾ ನಿವೇಶನ ಹಂಚಿಕೆ: ರಾಜಕೀಯ ಪ್ರೇರಿತ ಆರೋಪಗಳು: ಸಿಎಂ ಸಿದ್ದರಾಮಯ್ಯ



**ಹಂಪಿ ಟೈಮ್ಸ್ ಬೆಂಗಳೂರು**

ಮುಡಾ ನಿವೇಶನ ಹಂಚಿಕೆ ಕುರಿತು ಬಿಜೆಪಿ ಮಾಡುತ್ತಿರುವ ಆರೋಪಗಳು ರಾಜಕೀಯ ಪ್ರೇರಿತ ಆರೋಪಗಳೇ ಹೊರತು ಅಂಕಿಅಂಶಗಳ ಮೇಲೆ ಮಾಡಿರುವ ಆರೋಪಗಳಲ್ಲ ಮುಖ್ಯಮಂತ್ರಿ ಸಿದ್ದರಾಮಯ್ಯ. ಅವರು ಇಂದು ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು.

ಬಿಜೆಪಿಯವರಿಗೆ ಬೇರೇನೂ ವಿಷಯವಿಲ್ಲ. ಆರ್.ಎಸ್.ಎಸ್ ಹೇಳಿದಂತೆ ಮಾಡುತ್ತಾರೆ. ವಿಷಯವೇ ಇಲ್ಲ. ಮುಡಾ ನಮ್ಮ 3.16 ಎಕರೆ ಜಮೀನಿನಲ್ಲಿ ನಿವೇಶನಗಳನ್ನು ಮಾಡಿ ಹಂಚಿದರೆ ನಾವು ಕೇಳಬಾರದೇ. ಹಾಗಿದ್ದಲ್ಲಿ ಜಮೀನಿನ ಮೌಲ್ಯ 60 ಕೋಟಿ.ರೂ.ಗಳನ್ನು ಕೊಟ್ಟುಬಿಡಲಿ. ನಮ್ಮ ಜಮೀನು ಒತ್ತುವರಿ ಮಾಡಿಕೊಂಡಿರುವುದನ್ನು ಅವರೇ ಸಭೆಯಲ್ಲಿ ಒಪ್ಪಿಕೊಂಡಿದ್ದಾರೆ. ಅದಕ್ಕಾಗಿ ನಿವೇಶನಗಳನ್ನು 50:50 ಅನುಪಾತದಲ್ಲಿ ನೀಡಿದ್ದಾರೆ. ಅದಕ್ಕೆ ನಾವು ಒಪ್ಪಿದ್ದೇವೆ. ಇಂಥ ಕಡೆಯೇ ನಿವೇಶನ ಕೊಡಿ ಎಂದು ನಾವು ಕೇಳಿಲ್ಲ ಎಂದರು.

ಬಿಜೆಪಿ ಅಧಿಕಾರದಲ್ಲಿತ್ತು ನಿವೇಶನ ನೀಡಿದಾಗ 2021 ನೇ ಇಸವಿಯಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಅವರೇ ನಿವೇಶನಗಳನ್ನು ಹಂಚಿ ಈಗ ಕಾನೂನುಬಾಹಿರ ಎಂದರೆ ಹೇಗೆ? ವಿಜಯನಗರ 3 ನೇ ಅಥವಾ 4 ನೇ ಹಂತದಲ್ಲಿ ಕೊಡಿ ಎಂದು ಕೇಳಲಿಲ್ಲ. ನಮಗೆ ಪರ್ಯಾಯವಾಗಿ 50:50 ಅನುಪಾತದಲ್ಲಿ ಕೊಡಲು ಒಪ್ಪಿದಂತೆ ಕೊಡಿ ಎಂದು ಹೇಳಿದ್ದೇವೆ. ಇದು ರಾಜಕೀಯ ಪ್ರೇರಿತ ಆಪಾದನೆ ಎಂದರು.

ನಿವೇಶನ ಕೊಟ್ಟಿರುವುದು ತಪ್ಪು ಎಂದರೆ ಪರಿಹಾರ ಕೊಡಲಿ ಭೂ ಸ್ವಾಧೀನವಾದಲ್ಲಿಯೇ ಜಮೀನು ಕೊಡಬೇಕೆಂಬ ನಿಯಮವಿದೆ ಎಂದು ಪರ್ತಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿಎಂ ನಾವು ಇಂಥ ಕಡೆಯೇ ನಿವೇಶನ ಕೊಡಿ ಎಂದು ಕೇಳಿಲ್ಲ. ಜಾಗ ಕೊಟ್ಟಿರುವುದು ತಪ್ಪು ಎನ್ನುವುದಾದರೆ ನಮಗೆ ಪರಿಹಾರ ಕೊಡಲಿ. ಅಕ್ಟೋಬರ್ 2023 ರಲ್ಲಿ ಸಚಿವರು 50:50 ಅನುಪಾತದಲ್ಲಿ ಜಮೀನು ಕೊಡುವುದನ್ನು ರದ್ದು ಮಾಡಿ ಎಂದು ಬರೆದಿದ್ದಾರೆ. ಬರೆಯದೇ ಹೋದರೂ ಕೂಡ 62 ಕೋಟಿ ರೂ.ಗಳನ್ನು ಕಾನೂನಿನ ಪ್ರಕಾರ ಕೊಟ್ಟುಬಿಡಲಿ. ನಮಗೆ ಕೊಟ್ಟಿರುವ 14 ನಿವೇಶನಗಳ ಬೆಲೆ ಇದಕ್ಕಿಂತಲೂ ಕಡಿಮೆ ಇದೆ. ಒಂದು ಎಕರೆಗೆ 44 ಸಾವಿರ ಚದರ ಅಡಿಯಾದರೆ ನನಗೆ ಕೊಟ್ಟಿರುವುದು 38.264 ಚದರ ಅಡಿ. ಒಂದು ಎಕರೆಗಿಂತ ಕಡಿಮೆಯಾಗಿದೆ. ಪರಿಹಾರವಾಗಿ ಕೊಟ್ಟಿರುವ ಜಮೀನಿನ ಬೆಲೆ ಎಷ್ಟಿದೆ ಎಂದು ನನಗೆ ತಿಳಿದಿಲ್ಲ. ನನಗೆ 62 ಕೋಟಿ ಕೊಟ್ಟುಬಿಡಲಿ ಎಂದರು.

ನಗರಾಭಿವೃದ್ಧಿ ಸಚಿವರು ನಿವೇಶನ ಹಂಚಿಕೆಗೆ ಸಂಬಂಧಿಸಿದ ಕಡತವನ್ನು ತೆಗೆದುಕೊಂಡು ಬಂದಿದ್ದಾರೆ ಎಂಬ ಪರ್ತಕರ್ತರ ಪ್ರಶ್ನೆಗೆ ಉತ್ತರಿಸಿ ಕಡತ ತಂದಿಲ್ಲ ಎಂದರು.

# ಜು. 10ಕ್ಕೆ ರಾಜ್ಯ ಮಾನವ ಹಕ್ಕುಗಳ ಆಯೋಗದಿಂದ ಜಿಲ್ಲಾ ಪ್ರವಾಸ

**ಹಂಪಿ ಟೈಮ್ಸ್ ಕೊಪ್ಪಳ**

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರ ತಂಡವು ಜುಲೈ 10 ರಂದು ಕೊಪ್ಪಳ ಜಿಲ್ಲೆಯಲ್ಲಿ ಒಂದು ದಿನದ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಜುಲೈ 10ಕ್ಕೆ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರ ತಂಡವು ಬೆಳಿಗ್ಗೆ 09.30 ಗಂಟೆಗೆ ಗದಗನಿಂದ ನಿರ್ಗಮಿಸಿ ರಸ್ತೆ ಮಾರ್ಗವಾಗಿ 11.30 ಗಂಟೆಗೆ ಕೊಪ್ಪಳಕ್ಕೆ ಆಗಮಿಸುವರು. ಮಧ್ಯಾಹ್ನ 12 ಗಂಟೆಯಿಂದ 01 ಗಂಟೆಯವರೆಗೆ ಜಿಲ್ಲಾ ಪಂಚಾಯತಿಯ ಜೆ.ಎಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸುವರು. ಸಂಜೆ 07.30 ಗಂಟೆಗೆ ಕೊಪ್ಪಳದಿಂದ ನಿರ್ಗಮಿಸಿ ರಸ್ತೆ ಮಾರ್ಗವಾಗಿ 08 ಗಂಟೆಗೆ ಮುನಿರಾಬಾದ್‌ಗೆ ಮುನಿರಾ ಬಾದ್‌ನ ವೈಕುಂಠ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡುವರು ಎಂದು ತಿಳಿಸಿದೆ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA